DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ


ಮಾಸಪತ್ರಿಕೆ - 15 ಸಪ್ಟೆಂಬರ್ 2009


॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-9 ಸಂಚಿಕೆ-9 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**





॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ವಿರೋಧಿ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೨ ಸಲುವ ಅಶ್ವಯುಜ ಶುದ ೧೦ ಯು, ತಾ.28-09-2009ನೇ ಸೋಮವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| **ಅಂಬಲಪಾಡಿ ಕೃಷ್ಣರಾವ್** | **ಸಿ. ಎಸ್. ರಾವ್** | **ಕೆ. ವೇಣುಗೋಪಾಲ್ ರಾವ್** |
|---|---|---|
| ಗೌರವಾಧ್ಯಕ್ಷರು | ಅಧ್ಯಕ್ಷರು | ಕಾರ್ಯದರ್ಶಿ |

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

**ವಿ.ಸೂ.** : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

### ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.28-09-2009ನೇ ಸೋಮವಾರ ಪೂರ್ವಾಹ್ನ ಗಂಟೆ 9.00 ರಿಂದ ಸಂಜೆ 2.00 ಗಂಟೆಯ ವರೆಗೆ ನಮ್ಮ ಸಮಾಜ ಬಾಂಧವರಿಗಾಗಿ**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| | 1 | 2 | 3 | |
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | 8ನೇ ತರಗತಿಯಿಂದ ಪದವಿಪೂರ್ವ ತರಗತಿ | (4 ನಿಮಿಷ) |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-7ನೇ ತರಗತಿಯವರೆಗೆ (ಯಾವುದೇ ದೃಶ್ಯ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು (ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿರುವ ಶ್ರೀಶಾರದಾ ಮಾತೆಯ ಚಿತ್ರ) | (90 ನಿಮಿಷ) |
| **ರಂಗವಲ್ಲಿ** | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ) | 8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ | (90 ನಿಮಿಷ) |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (ಕಂಠಪಾಠ ಸ್ಪರ್ಧೆಯ ಶ್ಲೋಕಗಳನ್ನು 3ನೇ ಪುಟದಲ್ಲಿ ನೀಡಲಾಗಿದೆ. ಈ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳುವ ಶ್ಲೋಕಗಳನ್ನು ಹೇಳಬೇಕು) | | 8ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ | |
| **ಛದ್ಮವೇಷ** (ಏಕವ್ಯಕ್ತಿ) ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8-10ನೇ ತರಗತಿಯವರೆಗೆ | (4 ನಿಮಿಷ) |
| **ಹೂಮಾಲೆ ಕಟ್ಟುವುದು** (ಮುಕ್ತ ಅವಕಾಶ) | ಯಾವುದೇ ಜಾತಿಯ ಹೂಗಳನ್ನು ಬಾಳೆಯ ಹಗ್ಗದಲ್ಲಿ ಕಟ್ಟುವುದು (ಕೃತಕ ಹೂ ನಿಷಿದ) (ಬೆಳಿಗ್ಗೆ 10.30 ರಿಂದ ಪ್ರಾರಂಭ) ಹೂಗಳನ್ನು ಸ್ಪರ್ಧಿಗಳೇ ತರಬೇಕು. | | | (30 ನಿಮಿಷ) |
| **ಚೂರ್ಣಿಕೆ ಹೇಳುವುದು** | ಎಲ್ಲಾ ವಯಸ್ಸಿನವರಿಗೂ ಮುಕ್ತ ಅವಕಾಶ. | | ಮಧ್ಯಾಹ್ನ ಊಟ ನಡೆಯುತ್ತಿರುವಾಗ ಚೂರ್ಣಿಕೆ ಹೇಳುವುದು | |

ವಿಶೇಷ ಸೂಚನೆಗಳು : 1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. 2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು. 3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು. 4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು. 5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

**ಶ್ರೀಶಾರದಾ ಮಂಟಪ, ಕುಂಜಿಬೆಟ್ಟು ಇದರ ಹವ್ಯಾಸಿ ಕಲಾವಿದರಿಂದ ಯಕ್ಷಗಾನ, ಪ್ರಸಂಗ : ''ಜಾಂಬವತಿ ಕಲ್ಯಾಣ''. ಸಮಯ: ಸಂಜೆ 4-00ರಿಂದ 6-30**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಒಬ್ಬ ರಾಜನ ಬುದ್ಧಿವಂತ ಮಂತ್ರಿ ಆಕಸ್ಮಿಕವಾಗಿ ಮರಣ ಹೊಂದಿದ. ರಾಜನಿಗೆ ಯೋಗ್ಯ ಮಂತ್ರಿಯನ್ನು ಆಯ್ಕೆ ಮಾಡ ಬೇಕಾದ ಪರಿಸ್ಥಿತಿ ಎದುರಾಯಿತು. ದೇಶದಲ್ಲೆಲ್ಲಾ ಡಂಗುರ ಸಾರಿಸಿ, ಮಂತ್ರಿ ಪಟ್ಟಕ್ಕಾಗಿ ಬಂದ ಆಕಾಂಕ್ಷಿಗಳನ್ನು ಪರೀಕ್ಷಿಸಿ ಇಬ್ಬರು ವ್ಯಕ್ತಿಗಳನ್ನು ಕೊನೆಯ ಪರೀಕ್ಷೆ ಗಾಗಿ ಆಯ್ಕೆ ಮಾಡಿದನು. ಇಬ್ಬರಿಗೂ ಒಂದೊಂದು ಡಬ್ಬಿಯನ್ನು ಕೊಟ್ಟು ಈ ಡಬ್ಬವನ್ನು 60-70 ಮೈಲು ದೂರದಲ್ಲಿರುವ ರಾಜನ ಮಗಳಿಗೆ ಮುಟ್ಟಿಸಿ ಬರಬೇಕೆಂದು ತಿಳಿಸಲಾಯಿತು.

ಇಬ್ಬರೂ ಇದೆಂತಹ ಪರೀಕ್ಷೆ? ಎಂದು ಕುತೂಹಲದಿಂದಲೇ ಅರಮನೆಯಿಂದ ಹೊರಬಿದ್ದರು. ಬಹಳಷ್ಟು ಯೋಚಿಸಿದರು. ಬೇರೆ ಬೇರೆಯಾಗಿ ಪ್ರಯಾಣಿಸುತ್ತಿದ್ದ ಇವರಲ್ಲಿ ಮೊದಲನೆಯವನು ಡಬ್ಬಿಯಲ್ಲಿ ಏನಿರಬಹುದು ಎಂದು ತಿಳಿಯಲು ಮೆಲ್ಲನೆ ಡಬ್ಬವನ್ನು ಬಿಚ್ಚಿದ. ಡಬ್ಬಿಯಲ್ಲಿ ತಿನ್ನುವ ಚಕ್ಕುಲಿಗಳಿದ್ದವು. ಎಣಿಸಿದಾಗ 100 ಚಕ್ಕುಲಿಗಳು. ಮತ್ತು ಕುತೂಹಲದಿಂದ ಒಂದನ್ನು ತೆಗೆದು ತಿಂದನು. ಹೀಗೆ ಕೆಲವು ಚಕ್ಕುಲಿಗಳು ಖಾಲಿಯಾದವು. ನಂತರ ನೇರವಾಗಿ ರಾಜಕುಮಾರಿಗೆ ಡಬ್ಬವನ್ನು ಮುಟ್ಟಿಸಿದನು.

ಎರಡನೇಯವನು ಕೂಡಾ ಕುತೂಹಲ ದಿಂದ ಡಬ್ಬ ಬಿಚ್ಚಿದ. ಚಕ್ಕುಲಿಗಳನ್ನು ಎಣಿಸಿದ. 100 ಚಕ್ಕುಲಿಗಳಿದ್ದವು. ಆದರೆ ಈತ ಮಾತ್ರ ಆ ಎಲ್ಲಾ ಚಕ್ಕುಲಿಗಳ ಹೊರಗಿನ ಒಂದೊಂದು ಸುರುಳಿಯನ್ನು ತಿಂದು ಲೆಕ್ಕಕ್ಕೆ 100 ಚಕ್ಕುಲಿ ಸರಿ ಇರುವಂತೆ ಡಬ್ಬಿ ಮುಚ್ಚಿ, ಡಬ್ಬವನ್ನು ರಾಜಕುಮಾರಿಗೆ ತಲುಪಿಸಿದ.

ಕೆಲವು ದಿನಗಳ ಬಳಿಕ ಮಹಾರಾಜನ ಆಯ್ಕೆ ಪ್ರಕಟವಾಯ್ತು. ಎರಡನೇ ವ್ಯಕ್ತಿ ಮಂತ್ರಿಯಾಗಿ ಆಯ್ಕೆಯಾಗಿದ್ದ ಮತ್ತು ಅಧಿಕಾರ ಸ್ವೀಕಾರವನ್ನು ಮಾಡಿದ.

ಮೊದಲನೇ ವ್ಯಕ್ತಿ ಕೆಲವೇ ಚಕ್ಕುಲಿಗಳನ್ನು ತಿಂದಿದ್ದ. ಎರಡನೇ ವ್ಯಕ್ತಿ ತಿಂದ ಚಕ್ಕುಲಿಗಳ ಪ್ರಮಾಣ ಹೆಚ್ಚು; ಆದರೆ ಅವನು ತಿಂದದ್ದು ಇತರರು ತಿಳಿಯಲಾರರು. ಆದರೂ ಆತನೇ ಮಂತ್ರಿಯಾಗಿ ಆಯ್ಕೆಪಡೆದ.

ಇದು ಬಹಳ ಯೋಚಿಸಬೇಕಾದ ವಿಚಾರ. ಎರಡನೇ ವ್ಯಕ್ತಿ ಮೊದಲ ವ್ಯಕ್ತಿಗಿಂತಲೂ ಹೆಚ್ಚು ಮೋಸಗಾರ, ಮೊದಲ ವ್ಯಕ್ತಿಯಲ್ಲಿದ್ದ ಈ ಕಪಟತನದ ಪ್ರಮಾಣ ತುಂಬಾ ಕಡಿಮೆ. ಹೆಚ್ಚು ಭ್ರಷ್ಟನಾದ ಎರಡನೇ ವ್ಯಕ್ತಿಯೇ ಹೇಗೆ ಆಯ್ಕೆಯಾದನು?

ತಿಂದರೂ ತಿಂದದ್ದು ತಿಳಿಯಬಾರದು. ಇತರರಿಗೆ ತಿಳಿಯದಂತೆ ಹೆಚ್ಚು ತಿನ್ನಬೇಕೆಂದೇ? ಅಥವಾ ತನ್ನ ಬುದ್ಧಿವಂತಿಕೆಯಿಂದ ಇತರರು ತಿಳಿಯದಂತೆ ಹೆಚ್ಚು ತಿಂದವನೇ ಯೋಗ್ಯ ವ್ಯಕ್ತಿ ಎಂದು ತಿಳಿದು ಆತನನ್ನು ಆಯ್ಕೆ ಮಾಡಿದನೆ? ಮುಂದೆ ಇಂತಹ ಬುದ್ಧಿವಂತಿಕೆ ಇರುವ ವ್ಯಕ್ತಿಯೇ ತನ್ನ ಕೈಕೆಳಗೆ ಮಂತ್ರಿಯಾಗಿರಬೇಕೆಂದು ರಾಜ ಬಯಸಿದನೇ?

ಇಂದಿನ ಇಂತಹ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಚಿಂತನೆ ಮಾಡಬೇಕಾದುದು ನಮ್ಮ ಸರದಿ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)


ನನ್ನ ಅಭಿಪ್ರಾಯದಲ್ಲಿ ಇಲ್ಲಿಗೆ ಅನತಿ ದೂರದಲ್ಲಿ ಒಂದು ವನವಿದೆ. ಅದರ ಹೆಸರು ವೃಂದಾವನ. ಅಲ್ಲಿ ಸಮೃದ್ಧವಾಗಿ ಬೆಳೆದ ಹುಲ್ಲುಗಾವಲುಗಳಿವೆ. ಪಕ್ಕದಲ್ಲೇ ಯಮುನೆಯಿದೆ. ಸುಂದರ ವೃಕ್ಷಗಳೂ, ಲತೆಗಳೂ ಬೆಳೆದು ನೆರಳಿನ ಚಪ್ಪರವನ್ನೇ ರಚಿಸಿವೆ. ನಾವಲ್ಲಿ ಸುಖವಾಗಿ ಇರಬಹುದು''. ಎಂದು ನಂದನೇ ಮೊದಲಾದ ಗೋಪಾಲರು ಅವನ ಮಾತನ್ನು ಅನುಮೋದಿಸಿದರು. ಕೂಡಲೇ ಅವರೆಲ್ಲ ತಂತಮ್ಮ ಪರಿವಾರಗಳೊಂದಿಗೆ ವೃಂದಾವನಕ್ಕೆ ವಲಸೆ ಹೋದರು.

ವೃಂದಾವನದ ಹರಿದ್ವರ್ಣದ ವನಸಿರಿಯನ್ನು, ಗೋವರ್ಧನ ಪರ್ವತವನ್ನೂ, ಯಮುನಾ ನದಿಯ ಮರಳು ದಂಡೆಯನ್ನೂ ಕಂಡು ರಾಮ, ಕೃಷ್ಣರಿಗೆ ಪರಮಾನಂದವಾಯಿತು. ತಮ್ಮ ಆಟಗಳಿಗೆ ಉತ್ತಮವಾದ ಸ್ಥಳವೆಂದು ತೃಪ್ತಿಪಟ್ಟರು.

ಗೊಲ್ಲರ ಮಕ್ಕಳೊಡನೆ ಆಟವಾಡುತ್ತಾ ರಾಮ, ಕೃಷ್ಣರು ಬೆಳೆಯುತ್ತಿದ್ದರು. ಕೃಷ್ಣನಿಗೆ ನವಿಲುಗರಿ, ಪಿಳ್ಳಂಗೋವಿ ಎಂದರೆ ಬಲು ಇಷ್ಟ. ತನ್ನ ಊರ್ಧ್ವಶಿಖೆಯಲ್ಲಿ ನವಿಲುಗರಿಯನ್ನು ಸಿಕ್ಕಿಸಿಕೊಂಡು ಪಿಳ್ಳಂಗೋವಿಯನ್ನು ಮಧುರವಾಗಿ ನುಡಿಸುವುದು ಅವನ ಒಲವಿನ ಹವ್ಯಾಸವಾಗಿತ್ತು. ಅವನ ಕೊಳಲಿನ ನಾದಕ್ಕೆ ಅದೆಂತಹ ಮಾದಕ ಶಕ್ತಿಯಿತ್ತೆಂದರೆ ಅದನ್ನು ಕೇಳಿದೊಡನೆ ಮನುಷ್ಯ, ಮೃಗ, ಪಕ್ಷಿಗಳು ತಮ್ಮನ್ನೇ ಮರೆತು ಬಿಡುತ್ತಿದ್ದರು. ಗೋಪಿಯರು, ಮುಖ್ಯವಾಗಿ ಗೋಪ ತರುಣಿಯರು ಮೋಹಕ್ಕೊಳಗಾಗುತ್ತಿದ್ದರೆ. ಕರುಗಳು ಹಾಲು ಕುಡಿಯುವುದನ್ನು ಬಿಟ್ಟು ಕೃಷ್ಣನ ಬಳಿಗೆ ಧಾವಿಸುತ್ತಿದ್ದವು. ಹಸುಗಳು ಹುಲ್ಲು ಮೇಯುವುದನ್ನು ಮರೆತು ಅವನ ಸುತ್ತಲೂ ನೆರೆಯುತ್ತಿದ್ದವು. ಗೋಪ ಬಾಲಕರಿಗಂತು ಕೃಷ್ಣನೇ ಪರಮ ನಾಯಕನಾಗಿದ್ದನು. ಕಾಲ ಕಳೆಯುತ್ತಿದ್ದಂತೆ ರಾಮ, ಕೃಷ್ಣರೂ ಕರುಗಳನ್ನು ಮೇಯಿಸುವುದನ್ನು ಕಲಿತರು. ಈ ಇಬ್ಬರು ಬಾಲಕರಿಂದಾಗಿ ವೃಂದಾವನವು ಆನಂದದ ಮಂದಿರವಾಯಿತು.

ಒಂದು ದಿನ ಕಂಸನ ಅನುಯಾಯಿಯಾದ ಅಸುರನೊಬ್ಬ ವತ್ಸ(ಕರು)ದ ರೂಪ ತಾಳಿ ಅಲ್ಲಿಗೆ ಬಂದನು. ರಾಮ, ಕೃಷ್ಣರು ಮೇಯಿಸುತ್ತಿದ್ದ ಕರುಗಳ ಹಿಂಡಿನಲ್ಲಿ ಗುಟ್ಟಾಗಿ ಸೇರಿಕೊಂಡನು. ಆದರೆ ಬಾಲಭಗವಂತನಿಗೆ ಇದು ತಿಳಿದು ಹೋಯಿತು. ಅವನು ಬಲರಾಮನಿಗೆ ಕಣ್ಸನ್ನೆ ಮಾಡಿ ಏನೂ ತಿಳಿಯದವನಂತೆ ಆ ವತ್ಸಾಸುರನ ಬಳಿಗೆ ಹೋದನು. ಕೃಷ್ಣನನ್ನು ಕೊನೆಗಾಣಿಸಲು ತಕ್ಕ ಸಮಯ ಬಂತೆಂದು ಅಸುರನೂ ಅಂದುಕೊಂಡನು. ಅವನು ಕೃಷ್ಣನ ಮೇಲೆ ಆಕ್ರಮಣ ಮಾಡುವುದಕ್ಕೆ ಮುನ್ನವೇ ಕೃಷ್ಣನು ಅವನ ಬಾಲವನ್ನು ಬಲವಾಗಿ ಹಿಡಿದು, ಎತ್ತಿ ಗರಗರನೆ ತಿರುಗಿಸಿದನು. ಹಾಗೇ ಅಲ್ಲಿದ್ದ ಒಂದು ಬೇಲದ ಮರಕ್ಕೆ ಅಪ್ಪಳಿಸಿಬಿಟ್ಟನು. ರಕ್ಕಸನು ಭಯಂಕರವಾಗಿ ಅರಚುತ್ತ ತನ್ನ ನಿಜ ರೂಪವನ್ನು ತಾಳಿ ನೆಲಕ್ಕೆ ಬಿದ್ದನು. ಆ ರಭಸಕ್ಕೆ ಅನೇಕ ಮರಗಳ ಮುರಿದುಹೋದವು. ಇದನ್ನು ನೋಡಿದ ಗೊಲ್ಲರ ಮಕ್ಕಳು ವಿಸ್ಮಯದಿಂದ ಮತ್ತು ಸಂತೋಷದಿಂದ ಕೃಷ್ಣನನ್ನು ಹೊಗಳಿದರು. ದೇವತೆಗಳೂ ಸಂತುಷ್ಟರಾಗಿ ಹೂಮಳೆಗರೆದರು. ಜಗತ್ಪಾಲಕರಾದ ರಾಮ, ಕೃಷ್ಣರು ಕರುಗಳನ್ನು ಕಾಯುವ ಕಾಯಕದಲ್ಲಿ ಮಗ್ನರಾದರು. ಅವರು ಎಲ್ಲ ಗೊಲ್ಲರಂತೆ ಬೆಳಗ್ಗೆ ಬುತ್ತಿಕಟ್ಟಿಕೊಂಡು ಕರುಗಳನ್ನು ಮೇಯಿಸಲು ಹೋಗುತ್ತಿದ್ದರು.

ಇನ್ನೊಂದು ದಿನ ಒಂದು ಬೃಹದ್ಗಾತ್ರದ ಬಕಪಕ್ಷಿಯನ್ನು ಗೊಲ್ಲರ ಹುಡುಗರು ಕಂಡರು. ಅದರ ಅದ್ಭುತ ಗಾತ್ರವನ್ನು ನೋಡಿದ ಅವರು ಹೆದರಿ ಕಂಗಾಲಾದರು. ಆಗ ಅಲ್ಲಿಗೆ ಕೃಷ್ಣನೂ ಬಂದನು. ಕೃಷ್ಣನನ್ನು ಕಾಣುತ್ತಲೇ ಅದು ದೊಡ್ಡದಾಗಿ ತನ್ನ ಕೊಕ್ಕನ್ನು ತೆರೆದು ಅವನನ್ನು ನುಂಗಿಯೇ ಬಿಟ್ಟಿತು. ಇದನ್ನು ನೋಡಿ ಬಲರಾಮ ಮತ್ತು ಇತರ ಬಾಲಗೋಪಾಲರು ದುಃಖ, ಭಯದಿಂದ ಮೂರ್ಛೆಹೋದರು. ಬಕರಾಕ್ಷಸನ ಬಾಯೊಳಗೆ ಸೇರಿದ ಕೃಷ್ಣನು ಬೆಂಕಿಯಂತೆ ಸುಡಲಾರಂಭಿಸಿದನು. ಬಿಸಿಯನ್ನು ತಡೆಯಲಾರದೆ ಬಕನು ಅವನನ್ನು ಉಗುಳಿಬಿಟ್ಟನು. ಪುನಃ ವಜ್ರದಂತೆ ಕಠಿಣವಾದ ತನ್ನ ಕೊಕ್ಕಿನಿಂದ ಕೃಷ್ಣನನ್ನು ಕುಕ್ಕಲು ಬಂದನು. ಆಗ ಭಗವಂತನು ತನ್ನ ಪುಟ್ಟ ಕೈಗಳಿಂದ ಅವನ ಕೊಕ್ಕಿನ ಎರಡು ಭಾಗಗಳನ್ನು ಹಿಡಿದುಕೊಂಡು ಇಡಿಯಾಗಿ ಅವನನ್ನು ಸೀಳಿ ಬಿಟ್ಟನು. ಕಂಸನ ಅನುಚರನಾದ ಆ ರಾಕ್ಷಸನು ಗತಪ್ರಾಣನಾಗಿ ಬಿದ್ದನು. ಗೊಲ್ಲ ಬಾಲಕರು ಸಂತಸದಿಂದ ಕೇಕೆ ಹಾಕಿದರು. ದೇವತೆಗಳೂ ಭೇರಿ, ಮೃದಂಗ, ಶಂಖಗಳ ಧ್ವನಿ ಮಾಡುತ್ತಾ ಅವನ ಮೇಲೆ ಪುಷ್ಪ ವರ್ಷ ಮಾಡಿದರು. ಈ ಘಟನೆ ಗೊಲ್ಲರ ಮಕ್ಕಳಿಂದ ವೃಂದಾವನದಲ್ಲಿ ಪ್ರಸಾರವಾಯಿತು. ಎಲ್ಲರೂ ಮೂಕವಿಸ್ಮಿತರಾದರು. ರಾಮ, ಕೃಷ್ಣರನ್ನು ಇನ್ನೂ ಹೆಚ್ಚು ಪ್ರೇಮಾದರದಿಂದ ಕಾಣತೊಡಗಿದರು. ಹೀಗೆ ತಮ್ಮ ದಿವ್ಯಾದಿವ್ಯ ಬಾಲಲೀಲೆಗಳನ್ನು ತೋರುತ್ತಾ ಆ ಬಾಲಕರು ವೃಂದಾವನದಲ್ಲಿ ಕಿಶೋರಾವಸ್ಥೆಯನ್ನು ದಾಟಿದರು.



ಒಂದು ದಿನ ವನ ಭೋಜನದ ಏರ್ಪಾಡಾಯಿತು. ಕೃಷ್ಣನು ಬೆಳಗ್ಗೆ ಬೇಗನೆ ಎದ್ದು ಗೆಳೆಯರಾದ ಗೊಲ್ಲ ಬಾಲಕರನ್ನು ಕೊಂಬನ್ನೂದಿ ಎಬ್ಬಿಸಿ ಸಾವಿರಾರು ಕರುಗಳೊಂದಿಗೆ ವನದ ಕಡೆಗೆ ನಡೆದನು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಸ್ವಧರ್ಮಾಚರಣಂ ಶ್ರೇಯಃ**
**ಪರಧರ್ಮೋ ಭಯಾವಹಃ ।**
**ನ ಜಲೇ ವಾರಣಃ ಶಕ್ತಃ**
**ನ ಸ್ಥಲೇ ಮಕರೋ ಬಲೀ ॥**

ಅಂದರೆ ತನ್ನ ಧರ್ಮವನ್ನು ತಾನು ಆಚರಿಸುವುದೇ ಒಳಿತು. ಪರರ ಧರ್ಮ ಭಯಾನಕವಾದುದು. ನೀರಿನಲ್ಲಿ ಆನೆಗೆ ಬಲವಿಲ್ಲ. ನೆಲದಲ್ಲಿ ಮೊಸಳೆಗೆ ಶಕ್ತಿಯಿಲ್ಲ.

**ಪುಸ್ತಕ ಪರಿಚಯ :**

**ಶೃಂಗೇರಿ ಶ್ರೀ ಶಾರದಾ ಸ್ತೋತ್ರಗಳು**
**ಸಂಗ್ರಾಹಕರು : ವಾಗೀಶ ಶಾಸ್ತ್ರೀ ಎಸ್.,** ಎಂ.ಎ., (ಸಂಸ್ಕೃತ)

ವಿದ್ಯಾಸಿದ್ಧಿಪ್ರದೆಯಾದ ಶಾರದೆಯ ಬಗ್ಗೆ 15 ಸ್ತೋತ್ರಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ವಾಗೀಶ ಶಾಸ್ತ್ರೀ ಎಸ್. ಅವರು ಪ್ರಕಟಿಸಿದ್ದಾರೆ. ಈ ಪುಸ್ತಕದ ''ಪ್ರಾಗ್ಭಾರತೀ''ಯಲ್ಲಿ ಸಂಗ್ರಹಕಾರರು ತಿಳಿಸಿದಂತೆ- ''ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳ ಹೊಣೆ ಹೊತ್ತ ತ್ರಿಮೂರ್ತಿಗಳು ಕೂಡ ಭಕ್ತಿಯಿಂದ ಆರಾಧಿಸುವ ಶ್ರೀಮಾತೆಯನ್ನು ನಮಿಸಲೋ ಸ್ತುತಿಸಲೋ, ಪುಣ್ಯ ಮಾಡದವನಿಗೆ ಸಾಧ್ಯವಿಲ್ಲ. ದೇವಿಯನ್ನು ತಿಳಿದು ವಂದಿಸುವ ಮನಸ್ಸು ಬರಬೇಕಿದ್ದರೂ ಪುಣ್ಯ ಸಂಪನ್ನನಾಗಿರಬೇಕು. ಅಂತಹ ಮಹಾಪುಣ್ಯಶಾಲಿಗಳು ದೇವಿಯ ಅನೇಕ ಸ್ತೋತ್ರಗಳನ್ನು ರಚಿಸಿದ್ದಾರೆ. ಇತರ ಪುಣ್ಯಾತ್ಮರು ಆ ಸ್ತೋತ್ರಗಳನ್ನು ಪಠನ-ಮನನ ಮಾಡುತ್ತಾ ಇನ್ನಷ್ಟು ಪುಣ್ಯ ಭಾಜನರಾಗುತ್ತಿದ್ದಾರೆ. ಈ ಬಗೆಯ ಪುಣ್ಯಪ್ರದವಾದ ಕಾರ್ಯದಲ್ಲಿ ಸಹಾಯವಾಗಲೆಂದು ಈ ಪುಸ್ತಕವನ್ನು ಮುದ್ರಿಸಿ ಪ್ರಕಾಶಪಡಿಸುತ್ತಿದ್ದೇನೆ.

ಗುರುಮೂರ್ತಿಯೂ, ಗುರುಮಂಡಲ ರೂಪಿಣಿಯೂ ಆದ ಪರಮೇಶ್ವರಿಯು ಶಾರದೆಯ ರೂಪಿನಿಂದ ಶ್ರೀ ಗುರು ಶಂಕರರನ್ನು ಹಿಂಬಾಲಿಸಿ ಬಂದು ಭಕ್ತಜನ ಹಿತೈಷಿಯಾಗಿ ಪವಿತ್ರ ಕ್ಷೇತ್ರವಾದ ಶೃಂಗೇರಿಯಲ್ಲಿ ನೆಲೆಸಿದ್ದಾಳೆ. ಅಂತಹ ಶ್ರೀಶಾರದೆಯ ಸೇವೆ ಮಾಡಬೇಕು, ಶ್ರೀ ಗುರುಸೇವೆ ನಡೆಸಬೇಕು ಎಂಬ ಸಂಕಲ್ಪದಿಂದ ಈ ಪುಸ್ತಕವನ್ನು ಆಸ್ತಿಕಮಹಾಜನರ ಉಪಯೋಗಕ್ಕಾಗಿ ಪ್ರಕಟಿಸುತ್ತಿದ್ದೇನೆ.''

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು ಸಕಲ ವಿದ್ಯಾಧಿದೇವತೆಯಾದ ಶ್ರೀಶಾರದಾ ಪರಮೇಶ್ವರಿಯನ್ನು ಶೃಂಗೇರಿ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿದರು. ಅಂದಿನಿಂದಲೂ ಆ ಪೀಠದಲ್ಲಿ ಶ್ರೀಶಾರದೆಯು ವಿರಾಜಮಾನಳಾಗಿದ್ದಾಳೆ. ಶೃಂಗೇರಿ ಶಾರದಾ ಪೀಠದಲ್ಲಿ ಗುರುವರೇಣ್ಯರು ಆ ದೇವಿಯನ್ನು ಬಹುವಿಧವಾಗಿ ಸ್ತುತಿಸಿದರು. ಆ ಸ್ತೋತ್ರಗಳು ಅತ್ಯಂತ ಸುಂದರವಾಗಿವೆ. ಆ ಸ್ತೋತ್ರಗಳಲ್ಲಿ ಕೆಲವು ಸ್ತೋತ್ರಗಳನ್ನು ಆರಿಸಿ ಲೋಕೋಪಯೋಗಕ್ಕಾಗಿ ಅವುಗಳನ್ನು ಮುದ್ರಣ ಮಾಡಿಸಿ ಪ್ರಕಟಿಸಿದ ವಾಗೀಶ ಶಾಸ್ತ್ರೀಯವರಿಗೆ ಶ್ರೀ ಶೃಂಗೇರಿಯ ಶ್ರೀ ಜಗದ್ಗುರು ಮಹಾಸ್ವಾಮಿಯವರು ಶ್ರೇಯಪ್ರಾಪ್ತಿಯಾಗಲಿ ಎಂದು ಈ ಕಿರುಹೊತ್ತಗೆಯ ಪ್ರಾರಂಭದಲ್ಲಿ ಆಶೀರ್ವಚಿಸಿದ್ದಾರೆ.

**ಪ್ರಕಾಶಕರು :**
ವಾಗೀಶ ಶಾಸ್ತ್ರೀ ಎಸ್., ಶ್ರೀ ಜ್ಞಾನಶಕ್ತಿ ಪ್ರಕಾಶನ, ಅಂಬಲಪಾಡಿ, ಉಡುಪಿ.
**ದೂರವಾಣಿ : 0820-2533159**
**ಮುದ್ರಕರು :**
ಪ್ರಿಂಟ್ ಮೀಡಿಯಾ, ಮಂಗಳೂರು.
**ದೂರವಾಣಿ : 0820- 2440755**
*ಪ್ರಕಟಣೆ ವರ್ಷ : 2005, ಬೆಲೆ ರೂ.25/-*

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ



# ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.19-09-2009ರಿಂದ 28-09-2009ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀ ದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

- ಆಡಳಿತ ಮಂಡಳಿ

ಕಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-7ನೇ ತರಗತಿ ವರೆಗೆ

## ಸರಸ್ವತೀಸ್ತುತಿಃ

ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇನಿತ್ಯಂ ವಿದ್ಯಾಂಬುದ್ಧಿಂಚ ದೇಹಿಮೇ ॥೧॥

ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ ।
ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ ॥೨॥

ನಮಾಮಿ ಯಾಮಿನೀನಾಥಲೇಖಾಲಂಕೃತ ಕುಂತಲಾಮ್ ।
ಭವಾನೀಂ ಭವಸಂತಾಪ ನಿರ್ವಾಪಣ ಸುಧಾನದೀಮ್ ॥೩॥

ಭದ್ರಕಾಳ್ಯೈನಮೋ ನಿತ್ಯಂ ಸರಸ್ವತ್ಯೈ ನಮೋ ನಮಃ ।
ವೇದವೇದಾಂಗವೇದಾಂತ ವಿದ್ಯಾಸ್ಥಾನೇಭ್ಯ ಏವ ಚ ॥೪॥

ಬ್ರಹ್ಮಸ್ವರೂಪಾ ಪರಮಾ ಜ್ಯೋತೀರೂಪಾ ಸನಾತನೀ ।
ಸರ್ವವಿದ್ಯಾಧಿದೇವೀ ಯಾ ತಸ್ಯೈ ವಾಣ್ಯೈ ನಮೋನಮಃ ॥೫॥

ಯಯಾ ವಿನಾ ಜಗತ್ಸರ್ವಂ ಶಶ್ವಜ್ಜೀವಮೃತಂ ಭವೇತ್ ।
ಜ್ಞಾನಾಧಿದೇವೀ ಯಾ ತಸ್ಯೈ ಸರಸ್ವತ್ಯೈ ನಮೋನಮಃ ॥೬॥

ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ ಸದಾ ।
ಯಾ ದೇವೀ ವಾಗಧಿಷ್ಠಾತ್ರೀ ತಸ್ಯೈ ವಾಣ್ಯೈ ನಮೋನಮಃ ॥೭॥

ಹಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ

## ಶಾರದಾ ಭುಜಂಗಪ್ರಯಾತಸ್ತೋತ್ರಮ್

ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ
ಪ್ರಸಾದಾವಲಂಬಾಂ ಪ್ರಪುಣ್ಯಾವಲಂಬಾಮ್ ।
ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ
ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೨॥

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ
ಸ್ವಭಕ್ತೈಕಪಾಲಾಂ ಯಶಃಶ್ರೀಕಪೋಲಾಮ್ ।
ಕರೇ ತ್ವಕ್ಷಮಾಲಾಂ ಕನತ್ಪ್ರತ್ನಲೋಲಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೩॥

ಸುಸೀಮಂತವೇಣೀಂ ದೃಶಾ ನಿರ್ಜಿತೈಣೀಂ
ರಮತ್ಕೀರವಾಣೀಂ ನಮದ್ವಜ್ರಪಾಣಿಮ್ ।
ಸುಧಾಮಂಥರಾಸ್ಯಾಂ ಮುದಾ ಚಿಂತ್ಯ ವೇಣೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೪॥

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ
ಲಸತ್ಸಲ್ಲತಾಂಗೀಮನಂತಾಮಚಿಂತ್ಯಾಮ್ ।
ಸ್ಮೃತಾಂ ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೫॥

ಕುರುಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ
ಮರಾಲೇ ಮದೇಭೇ ಮಹೋಕ್ಷೇಽಧಿರೂಢಾಮ್ ।
ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೬॥

ಜ್ವಲತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ
ಭಜೇನ್ಮಾನಸಾಂಭೋಜ ಸುಭ್ರಾಂತಭೃಂಗೀಮ್ ।
ನಿಜಸ್ತೋತ್ರ ಸಂಗೀತನೃತ್ಯ ಪ್ರಭಾಂಗೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೭॥

ಭವಾಂಭೋಜನೇತ್ರಾಬ್ಜಸಂಪೂಜ್ಯಮಾನಾಂ
ಲಸನ್ಮಂದಹಾಸ ಪ್ರಭಾವಕ್ತ್ರಚಿಹ್ನಾಮ್ ।
ಚಲಚ್ಚಂಚಲಾಚಾರು ತಾಟಂಕಕರ್ಣಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥೮॥

## ಪುಸ್ತಕ ಬಿಡುಗಡೆ ಸಮಾರಂಭ

ಡಾ। ಎ. ಪಿ. ಕೃಷ್ಣ, ಪ್ರಾಧ್ಯಾಪಕರು, ಶರೀರ ಶಾಸ್ತ್ರವಿಭಾಗ, ಕೆ.ಎಸ್.ಹೆಗ್ಡೆ ಮೆಡಿಕಲ್ ಎಕಾಡಮಿ, ಮಂಗಳೂರು ಇವರು ತಮ್ಮ ಎರಡುವರೆ ದಶಕದ ಶಿಕ್ಷಕ ಅನುಭವದಿಂದ ಬರೆದು ಸಿದ್ದಪಡಿಸಿದ ಪುಸ್ತಕ "Text Book of Medical Physiology" ಇದರ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಿಟ್ಟೆ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ। ಎನ್. ವಿನಯ ಹೆಗ್ಡೆಯವರು ಪುಸ್ತಕ ಬಿಡುಗಡೆ ಮಾಡುತ್ತಾ ಡಾ। ಎ. ಪಿ. ಕೃಷ್ಣನವರ ಕರ್ತವ್ಯಪ್ರಜ್ಞೆ ಹಾಗೂ ಅವರು ಶಿಕ್ಷಕನಾಗಿ ಗಳಿಸಿದ ಅಪಾರ ಜನಮನ್ನಣೆಗಳ ಬಗ್ಗೆ ಗುಣಗಾನ ಮಾಡುತ್ತಾ ಅವರಿಗೆ ಮತ್ತು ಸಮಾರಂಭಕ್ಕೆ ಶುಭಕೋರಿದರು. ನಿಟ್ಟೆ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ। ಡಾ। ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸುಮನ್ ಕೃಷ್ಣ ಮಾಲಕರು, ಸುಮನ್ ಪಬ್ಲಿಕೇಶನ್ ಸ್ವಾಗತಿಸಿದರು. ಈ ಕಾರ್ಯಕ್ರಮದ ಕೊನೆಗೆ ಡಾ। ಎ. ಪಿ. ಕೃಷ್ಣ ಅವರು ತಮ್ಮ ವೃತ್ತಿ ಜೀವನದಲ್ಲಿ ಮುಂದೆ ಬರಲು ಸಹಕರಿಸಿದ ಎಲ್ಲರನ್ನೂ ನೆನಪಿಸುತ್ತಾ ವಂದನಾರ್ಪಣೆ ಮಾಡಿದರು.

## ಶಾರದಾ ಮಂಟಪದಲ್ಲಿ ಋಗುಪಾಕರ್ಮ

ತಾ.02-09-2009ರಂದು ಶ್ರೀಶಾರದಾ ಮಂಟಪದ ಜ್ಞಾನ ಮಂದಿರದಲ್ಲಿ ಶ್ರೀ ಹರೀಶ್ ಭಟ್, ಶ್ರೀ ನಾಗರಾಜ ಭಟ್ ಹಾಗೂ ಶ್ರೀ ಸುಬ್ರಹ್ಮಣ್ಯ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆ 9-30ರಿಂದ ಉಪಾಕರ್ಮವು ಜರಗಿತು. ಈ ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆಯಲ್ಲಿ ನಮ್ಮ ಸಮಾಜ ಬಾಂಧವರು ಬಂದು ಭಾಗವಹಿಸಿ, ಪ್ರಸಾದ ಭೋಜನವನ್ನು ಸ್ವೀಕರಿಸಿದರು.

## ಉದ್ಯೋಗ ವರ್ಗಾವಣೆ - ರಾಜೇಶ್ ಬಿ. ರಾವ್

ಜಾರ್ಖಂಡ್ ರಾಜ್ಯದ ರಾಂಚಿಯಲ್ಲಿ ಕರ್ನಾಟಕ ಬ್ಯಾಂಕ್ ಶಾಖೆಯಲ್ಲಿ ಶಾಖಾ ಪ್ರಭಾರ ಪ್ರಬಂಧಕರಾಗಿದ್ದ ಶ್ರೀ ರಾಜೇಶ್ ಬಿ. ರಾವ್ (ಚಿಟ್ಪಾಡಿ ಭುಜಂಗರಾಯರ ಪುತ್ರ) ಕರ್ನಾಟಕ ಬ್ಯಾಂಕ್ ಕೋಟ ಶಾಖೆಗೆ ಶಾಖಾ ಪ್ರಬಂಧಕರಾಗಿ ವರ್ಗಾವಣೆಗೊಂಡಿದ್ದು ಅವರು ಇತ್ತೀಚೆಗೆ ತಮ್ಮ ಅಧಿಕಾರವನ್ನು ವಹಿಸಿಕೊಂಡರು. ಶ್ರೀಯುತರು ಹಿಂದೆ ಈ ಬ್ಯಾಂಕಿನ ಚಿಕ್ಕಮಗಳೂರು, ಅಹಮದಾಬಾದ್, ಈರೋಡ್ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ ದ್ದರು.

## ಸುಬ್ರಹ್ಮಣ್ಯ ಸಭಾದಲ್ಲಿ ಅಷ್ಟಮಿ ಆಚರಣೆ





ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.30-08-2009 ಆದಿತ್ಯವಾರಂದು ''ಅಷ್ಟಮೀ ಆಚರಣೆ'' ಹಮ್ಮಿಕೊಳ್ಳಲಾಗಿತ್ತು.

ಪ್ರತಿ ವರ್ಷದಂತೆ ವಿವಿಧ ವಿಭಾಗಗಳಲ್ಲಿ ಮುದ್ದುಕೃಷ್ಣ ಸ್ಪರ್ಧೆ ಏರ್ಪಡಿಸಲಾಗಿತ್ತು. 3 ವಿಭಾಗಗಳಲ್ಲಿ ಭಗವದ್ಗೀತೆ ಕಂಠಪಾಠ ಸ್ಪರ್ಧೆ ನಡೆಯಿತು. 16 ವರ್ಷಕ್ಕಿಂತ ಮೇಲ್ಪಟ್ಟ ವಿಭಾಗಗಳಿಗೆ ಮೊಸರು ಕುಡಿಕೆಯ ಭಾಗವಾಗಿ ಮಡಕೆ ಒಡೆಯುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಎಲ್ಲಾ ವಿಭಾಗದ ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಾಳುಗಳು ಪಾಲ್ಗೊಂಡರು. ಮಧ್ಯಾಹ್ನ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಚಕ್ಕುಲಿ ಸಂಖ್ಯೆ ನಿಗದಿ ಸ್ಪರ್ಧೆ ರೋಚಕವಾಗಿ ಸಾಗಿತು.

ಮಧ್ಯಾಹ್ನದ ಬಳಿಕ ನಡೆದ ಮನೋರಂಜನಾ ಆಟ ಎಲ್ಲರಿಗೂ ಖುಷಿ ನೀಡಿತು. ಆ ಬಳಿಕ ಸದನದ ಕಲಾವಿದರಿಂದ ವಿವಿಧ ನೃತ್ಯಗಳನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರನ್ನೂ ರಂಜಿಸಿತು. ಸುಮಾರು 3 ಗಂಟೆಗಳಷ್ಟು ಹೊತ್ತು ಪುಟಾಣಿಗಳು, ಪುರುಷರು, ಮಹಿಳೆಯರು ಒಟ್ಟಾಗಿ ವಿವಿಧ ನೃತ್ಯಗಳನ್ನು ಪ್ರದರ್ಶಿಸಿದರು. ಆ ಬಳಿಕ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜನಗಣಮನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ವಿವಿಧ ಸ್ಪರ್ಧೆಗಳ ತೀರ್ಪುಗಾರರಾಗಿ ಸ್ನೇಹಲತಾ ದಿವಾಕರ್, ಸದಾಶಿವ ಶಾಸ್ತ್ರಿ, ಸುಮನ್‌ಕೃಷ್ಣ ಮಂಜಳಾ ಮುರಳೀಧರ ರಾವ್ ಸಹಕರಿಸಿದರು. ಸಂಜಯ್‌ಕುಮಾರ್, ಜಯಚಂದ್ರ ಕಾರ್ಯಕ್ರಮ ನಿರೂಪಿಸಿದರು. ಅತ್ಯಧಿಕ ಸಂಖ್ಯೆಯಲ್ಲಿ ಸಮಾಜಬಾಂಧವರು ಪಾಲ್ಗೊಂಡು ಕಾರ್ಯಕ್ರಮವನ್ನು ಚಂದಗಾಣಿಸಿಕೊಟ್ಟರು.

ವರದಿ : ನಾಗರಾಜ್ ವರ್ಕಾಡಿ

# ಕೌರವ ಗಡಣದಲ್ಲೊಂದು ಬೆಳಕಿನ ಕೂಸು



## (ಪೌರಾಣಿಕ ಕಥೆ)

**- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ**

ಹಸ್ತಿನಾವತಿಯ ಅರಮನೆಯಲ್ಲಿ ವರ್ಧಿಸುತ್ತಿರುವ ಪಾಂಡುತನಯರಲ್ಲಿ ಧರ್ಮರಾಯನಿಗೀಗ ಹದಿನಾರರ ಹರೆಯ; ಭೀಮನಿಗೆ ಹದಿನೈದು, ಅರ್ಜುನನಿಗೆ ಹದಿನಾಲ್ಕು, ನಕುಲ-ಸಹದೇವರಿಗೆ ಹದಿಮೂರು ವರ್ಷಗಳ ಎಳಸುತನ. ಕೌರವ ಸುತರಿಗೆ ಭೀಮನದ್ದೇ ಸಮ ವಯಸ್ಸು. ಕುಮಾರ ವಿಕರ್ಣನ ಪಾಲನೆ-ಪೋಷಣೆಗಳ ಹೊಣೆಯನ್ನು ಸುಗುಣಶೀಲೆಯೂ, ಸುಸಂಸ್ಕೃತಳೂ ಆದ ಚಾರುಮತಿಯೆಂಬ ದಾಸಿಯು ಹೊತ್ತು ಅವನಲ್ಲಿ ಉತ್ತಮ ಸಂಸ್ಕಾರ, ಸುಚರಿತ್ರ, ಸನ್ನಡತೆಗಳನ್ನು ಉದ್ದೀಪಿಸಿ ಬೆಳೆಸಿದ್ದಳು.

ಕೌರವ-ಪಾಂಡವ ಸುತರೆಲ್ಲರೂ ಆಟೋಟಗಳಲ್ಲಿ ಮಿಲಿತರಾಗಿ ಭಾಗವಹಿಸುತ್ತಿದ್ದರೂ ಅದೇಕೋ ಅವರೊಳಗೆ ಸಾಮರಸ್ಯದ ಹೊಂದಾಣಿಕ ಸಾಧ್ಯವಾಗಲೇ ಇಲ್ಲ. ದುರ್ಯೋಧನನು ತನ್ನ ತಮ್ಮಂದಿರ ತಂಡವನ್ನು ಕಟ್ಟಿಕೊಂಡು ಪಾಂಡವರನ್ನು ಕೆಣಕುತ್ತಲೇ ಇರುವನು. ವಿಕರ್ಣನೊಬ್ಬನು ಅವರೊಂದಿಗೆ ಬೆರೆಯದೆ ದೂರದ ವೃಕ್ಷದಡಿಯ ಶಿಲಾಸನದಲ್ಲಿ ಅಂತರ್ಮುಖಿಯಾಗಿ ಏನನ್ನೋ ಆಲೋಚಿಸುತ್ತಾ ಕುಳಿತಿರುವನು. ಉಳಿದ ಕೌರವ ಸುತರು ಅವನನ್ನು ಎಳೆದು ತಂದು ಈ ಸಮೂಹ ಸನ್ನಿಯಲ್ಲಿ ಅವನೂ ತೊಡಗಿಸಿಕೊಳ್ಳುವಂತೆ ಮಾಡುವರು. ಪಾಂಡವ ಬಲಭೀಮನನ್ನು ಕಂಡರೆ ಉಳಿದ ಕೌರವರಿಗೆ ಎಲ್ಲಿಲ್ಲದ ಈರ್ಷ್ಯೆ. ಆಟದ ನೆಪದಲ್ಲಿ ಭೀಮನನ್ನು ದೂರದ ಮರೆಗೆ ಕರೆದುಕೊಂಡು ಹೋಗಿ ಅವನ ಮೇಲೆರಗಿ ಗುದ್ದಿ ನೋಯಿಸುವರು. ಅವನು ಕೆರಳಿ ಕೌರವರೊಬ್ಬೊಬ್ಬರನೇ ಅಟ್ಟಿಸಿ ಹಿಡಿದು ಸದೆಬಡಿದು ಗಾಯಗೊಳಿಸುವನು. ಕೌರವರು ಧರ್ಮರಾಯನೊಡನೆ ದೂರನ್ನಿತ್ತರೆ ಇನ್ನು ಅವರ ತಂಟೆಗೆ ಹೋಗೆನೆಂದು ಅಣ್ಣನನ್ನು ಸಮಾಧಾನಪಡಿಸಿ ಅಣ್ಣ ಕಣ್ಮರೆಯಾದೊಡನೆಯೇ ಅವರೆಲ್ಲರನ್ನೂ ಎಳೆದು ಬೀಳಿಸಿ ತುಳಿದು ಸದೆಯುವನು. ಕೌರವರೆಲ್ಲರೂ ತಮ್ಮ ಮುರಿದ ಹಲ್ಲುಗಳನ್ನೂ, ಗಾಯಗೊಂಡ ಮೊಣಕಾಲ್ಗಳನ್ನೂ ಧೃತರಾಷ್ಟ್ರನಿಗೆ ತೋರಿಸಿ ಭೀಮನ ಮೇಲೆ ದೋಷಾರೋಪಣೆ ಮಾಡಿ ಅಳುವರು. ಭೀಷ್ಮ-ವಿಧುರರು ಅವರನ್ನು ಸಮಾಧಾನಪಡಿಸಿ ಭೀಮನೊಬ್ಬನನ್ನು ದೂರವಿರಿಸಿ ಉಳಿದ ಕೌರವ-ಪಾಂಡವರೊಂದಾಗಿ ಆಡುವಂತೆ ತಿಳಿಸುವರು. ಆದರೆ ಮರುದಿನ ಅವರೆಲ್ಲರೂ ಭೀಮನನ್ನೂ ಬಿಡದೆ ಆಟೋಟಗಳಲ್ಲಿ ಸೇರಿಸಿಕೊಳ್ಳುವರು. ಕೆಲವೊಮ್ಮೆ ಭೀಮನು ಮುಳ್ಳುಗಳಿಂದ ಗೀರಿಕೊಂಡು, ಮಣ್ಣಿನಲ್ಲಿ ಹೊರಳಾಡಿ ಗಾಯಗಳನ್ನು ಭೀಷ್ಮರಿಗೆ ತೋರಿಸಿ ಸುಳ್ಳು ಸುಳ್ಳೇ ಕೌರವರ ಮೇಲೆ ಆಪಾದಿಸುವನು.

ಒಂದು ದಿನ ಹಸ್ತಿನಾವತಿಯ ಹೊರಭಾಗದಲ್ಲಿ ಕೌರವರು ಸಹಿತ ನೂರಾರು ಬಾಲಕರು ಆಟವಾಡುತ್ತಾ ಒಂದು ಮಹಾವೃಕ್ಷವನ್ನೇರಿ ಕುಳಿತರು. ಅಚಾನಕವಾಗಿ ಅಲ್ಲಿಗೆ ಬಂದ ಭೀಮನು ಅವರನ್ನು ಕಂಡು ಮರದ ಕಾಂಡವನ್ನು ಹಿಡಿದು ಗಡ-ಗಡನೆ ಅಲುಗಿಸಲು ಬಾಲಕರೆಲ್ಲರೂ ಕೆಳಗೆ ಬಿದ್ದು ಕೈಕಾಲುಗಳನ್ನು ಮುರಿದುಕೊಂಡು, ತಲೆಯೊಡೆಸಿಕೊಂಡರು. ಧೃತರಾಷ್ಟ್ರನೊಡನೆ ದೂರಿತ್ತರೆ ಭೀಮನೊಡನೆ ಬೆರೆಯ ಬೇಡಿರೆಂದು ಅವನು ಉಪದೇಶಿಸಿದನು. ಭೀಮನಿಗೂ ದುರ್ಯೋಧನನಿಗೂ ದಿನದಿನವೂ ವೈರವು ವೃದ್ಧಿಸಿತು. ತೀರದ ಹಗೆಯಿಂದ ಬೆಂಬಿಡದೆ ದುರ್ಯೋಧನನು ಭೀಮನನ್ನು ಕೈಕಾಲು ಕಟ್ಟಿಸಿ ಕೆರೆಗೆ ನೂಕಿಸಿದನು; ವಿಷದ ಹಾವುಗಳಿಂದ ಕಚ್ಚಿಸಿದನು; ವಿಷದ ಭಕ್ಷ್ಯಗಳನ್ನು ತಿನ್ನಿಸಿದನು; ಜಗಜಟ್ಟಿ ಮಲ್ಲನೊಂದಿಗೆ ಸೆಣಸುವಂತೆ ಮಾಡಿದನು. ಇವೆಲ್ಲವುಗಳನ್ನೂ ತನ್ನ ಸಾಹಸದಿಂದ ತೊಲಗಿಸಿ ಭೀಮನು ಪಾರಾದನು. ತನ್ನನ್ನು ಈ ಎಲ್ಲಾ ಅಪಾಯಗಳಿಗೆ ಒಡ್ಡಿದ ನೂರು ಮಂದಿ ಕೌರವರನ್ನೂ ಕಡಿದು ಕೊಂದು ಶಾಕಿನಿಯರಿಗೆ ರಕ್ತವನ್ನು ಕುಡಿಸದೆ ಬಿಡೆನೆಂದು ಪ್ರತಿಜ್ಞೆ ಮಾಡಿದನು. ಅಣ್ಣನಾದ ದುರ್ಯೋಧನನಿಂದ ಇಷ್ಟೆಲ್ಲಾ ಕುಕಾರ್ಯಗಳು ನಡೆಯುತ್ತಾ ಇರುವಾಗ ವಿಕರ್ಣನೊಬ್ಬನೇ ಏಕಾಂತದಲ್ಲಿ ಕುಳಿತು ಚಿಂತಿಸುತ್ತಾ ಇರುವನು. ''ಪಾಂಡವರೂ ತಮ್ಮ ಸಹೋದರರೇ ಅಲ್ಲವೇ? ಅವರೊಡನೆ ಅಣ್ಣನಿಗೇಕೆ ಈ ಪರಿಯ ಹಗೆ? ಈ ಎಲ್ಲಾ ಹಗರಣಗಳಿಂದ ಸಾಧಿಸುವುದಾದರೂ ಏನನ್ನು?'' ಎಂಬ ಜಿಜ್ಞಾಸೆ ನಿತ್ಯವೂ ಅವನನ್ನು ಕಾಡಿಸುವುದು. ಇದನ್ನು ಗುರುಹಿರಿಯರೊಡನೆ ಕೇಳಿಯೂ ಬಿಟ್ಟನು. ಬಾಲಕರು ಬೆಳೆದು ದೊಡ್ಡವರಾದಂತೆ ಬುದ್ಧಿ ಬಲಿತು ಇವೆಲ್ಲವೂ ಸರಿಯಾಗುವುದೆಂಬ ಸಮಾಧಾನವೂ ಅವರಿಂದ ದೊರಕಿತು.

ಬಾಲಕ ವಿಕರ್ಣನಿಗೆ ಗುರುಹಿರಿಯರಲ್ಲಿ ಅತುಲ ಗೌರವ. ಹೆಂಗಳೆಯರಲ್ಲಿ ಹೆಚ್ಚಿನ ಪ್ರೇಮಾದರ. ಪೂಜಾ ವೇಳೆಯಲ್ಲಿ ತಪ್ಪದೆ ಅರಮನೆಯ ಪೂಜಾಗೃಹದಲ್ಲಿ ಉಪಸ್ಥಿತನಿರುವನು. ರಾಜಪುರೋಹಿತರು ಪೂಜಾ ವಿಧಿಗಳನ್ನು ಮುಗಿಸುವ ವರೆಗೆ ಅಂಜಲಿಬದ್ಧನಾದ ಧ್ಯಾನಸ್ಥನಾಗಿ ದೈವಭಕ್ತಿಯಲ್ಲಿ ಮನವನ್ನು ಕೇಂದ್ರೀಕರಿಸುವನು. ಪೂಜಾನಂತರ ಆರತಿ, ತೀರ್ಥಪ್ರಸಾದಗಳನ್ನು ಸ್ವೀಕರಿಸಿ ದೈವ, ಗುರುಹಿರಿಯರಿಗೆ ನಮಿಸಿ ನಿತ್ಯಕರ್ಮಗಳಲ್ಲಿ ತೊಡಗುವನು. ಕುಮಾರನಿಗೆ ಸದಾ ಧರ್ಮ ಜಿಜ್ಞಾಸೆಗಳಲ್ಲಿಯೇ ಹೆಚ್ಚಿನ ಆಸಕ್ತಿ. ಧರ್ಮಸೂಕ್ಷ್ಮಗಳ ತೊಡಕುಗಳನ್ನು ವಿದ್ಯಾಗುರುಗಳಾದ ಕೃಪಾಚಾರ್ಯರಲ್ಲೂ, ಭೀಷ್ಮ, ವಿಧುರಾದಿಗಳೊಂದಿಗೂ ಚರ್ಚಿಸಿ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವನು. ಕೃಪಾಚಾರ್ಯರಿಂದ ತರ್ಕ, ವ್ಯಾಕರಣ ಮೊದಲಾದ ಚತುರ್ದಶ ವಿದ್ಯೆಗಳನ್ನು ಇತರ ಕೌರವ-ಪಾಂಡವ ಬಾಲಕರೊಡಗೂಡಿ ಕಲಿತು ಪ್ರವೀಣನಾಗಿ ಧರ್ಮರಾಯನಿಗೆ ಸರಿಮಿಗಿಲೆನಿಸಿಕೊಂಡನು.

ಮುಂದೆ ದ್ರೋಣಾಚಾರ್ಯರಿಂದ ಕೌರವ ಪಾಂಡವ ಕುವರರೆಲ್ಲರಿಗೂ ಶಸ್ತ್ರಾಭ್ಯಾಸ-ಸಮರಕಲೆಗಳ ಪಾಠವೂ ಆಯಿತು. ಅರ್ಜುನನು ಧನುರ್ವಿದ್ಯೆಯಲ್ಲಿ ನಿಪುಣನಾದರೆ ದುರ್ಯೋಧನ ಭೀಮರು ಗದಾ ವಿದ್ಯೆಯಲ್ಲಿ ಪ್ರವೀಣರಾದರು. ಪರಶುರಾಮರಿಂದ ಧನುರ್ವಿದ್ಯೆಯನ್ನು ಕಲಿತು ಶಪಿತನಾದ ಕರ್ಣನೂ ಮುಂದೆ ದುರ್ಯೋಧನನ ಜೊತೆಗೂಡಿದನು. ವಿಕರ್ಣನು ಸಮರ ಕಲೆಗಳಲ್ಲಿ ನಿಪುಣನಾದರೂ ಅವನಿಗೇಕೋ ಇವುಗಳಲ್ಲಿ ಅಷ್ಟೊಂದು ಆಸಕ್ತಿ ಉಳಿಯಲೇ ಇಲ್ಲ. ಕೌರವ ಗಡಣದ ಈ ತೇಜಸ್ವಿ ಬೆಳಕಿನ ಕೂಸಿನ ಸತ್ವಪರೀಕ್ಷೆ ಮುಂದೊಂದು ದಿನ ನಡೆಯಲಿತ್ತು.

(ನಿರೀಕ್ಷಿಸಿರಿ : ಈ ಕಥಾ ಮಾಲಿಕೆಯ ಕೊನೆಯ ಭಾಗ :- ಧರ್ಮ ಧ್ವಜವನ್ನು ಎತ್ತಿ ಹಿಡಿದ ವಿಕರ್ಣ)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

**ಸಂಗ್ರಹ : ಸಿ.ಎಸ್.ರಾವ್.**

ತುಳುನಾಡಿನ ಸಂಸ್ಕೃತಿಯ ಹಾಗೂ ಚರಿತ್ರೆಯ ಅಭ್ಯಾಸದಲ್ಲಿ ಬ್ರಾಹ್ಮಣ್ಯದ ಪರಿಚಯ ಮತ್ತು ಪ್ರಭಾವವು ಒಂದು ವಿಶಿಷ್ಟ ಘಟಕವಾಗಿದೆ ಎನ್ನುವುದರಲ್ಲಿ ಅನುಮಾನವಿರಲಾರದು. ಬ್ರಾಹ್ಮಣರು ನಮ್ಮ ನಾಡಿಗೆ ಹೊರಗಿನಿಂದ ಬಂದವರೆಂಬುದರಲ್ಲಿ ಎರಡು ಮಾತಿರಲಾರದು. ನಾಡವರೂ ಹೊರಗಣಿಂದ ಬಂದವರೇ. ಆದರೆ ಕಾಲ ನಿರ್ದೇಶನದಲ್ಲಿ ಬ್ರಾಹ್ಮಣರಿಗಿಂತ ನಾಡವರು ಮೊದಲಿಗರು. ಬ್ರಾಹ್ಮಣರ ಆಗಮನವು ಎಂದಿನಿಂದಾಯಿತು, ಅವರು ಒಂದೇ ಸವನೆ ಆಗಮಿಸಿದರೋ ಅಥವಾ ತಂಡ ತಂಡವಾಗಿ ಹಂತಗಳಲ್ಲಿ ವಲಸೆ ಬಂದು ನೆಲೆಸಿದರೋ, ಅವರ ವಲಸೆ ಬರಲು ಕಾರಣಗಳು ಯಾವುವು, ಯಾವ ಯಾವ ಶಾಖೆಯವರು ಯಾವ ಯಾವ ಕಾಲದಲ್ಲಿ ಬಂದಿರುವರು, ಅವರ ಧಾರ್ಮಿಕ ಭಾವನೆಗಳು ಈ ನಾಡಿನ ಸ್ಥಳೀಯರ ಮೇಲೆ ಎಷ್ಟರಮಟ್ಟಿಗೆ ಪ್ರಭಾವಿತವಾದುವು, ಸ್ಥಳೀಯ ಸಂಸ್ಕೃತಿಯು ಬ್ರಾಹ್ಮಣರ ಮೇಲೆ ಎಷ್ಟರ ಪರಿಣಾಮವನ್ನು ಉಂಟುಮಾಡಿತು ಎಂಬಿತ್ಯಾದಿ ಪ್ರಶ್ನೆಗಳು ವಿಮರ್ಶೆಗೆ ಯೋಗ್ಯವಾದವುಗಳಾಗಿವೆ. ಪ್ರಕೃತಕ್ಕೆ ಈ ಲೇಖನದಲ್ಲಿ ಬ್ರಾಹ್ಮಣರು ತುಳುನಾಡಿಗೆ ಆಗಮಿಸಿ ನೆಲೆಸಿದ ಕಾಲ ಮತ್ತು ಹಂತಗಳ ಒಂದು ಪರಿಚಯವನ್ನು ಮಾಡಿಕೊಡಲು ಪ್ರಯತ್ನ ಮಾಡಿದ್ದೇನೆ. ಈ ವಿಮರ್ಶೆಯಲ್ಲಿ ಚಾರಿತ್ರಿಕ ಹಿನ್ನೆಲೆ ಪ್ರಧಾನವಾಗಿದೆ ವಿನಹ, ಪೌರಾಣಿಕ ವಿಷಯಗಳು ಅಷ್ಟೊಂದು ಗಣ್ಯ ಆಧಾರಗಳಾಗಿ ಸ್ವೀಕರಿಸಲ್ಪಡಲಿಲ್ಲ.

ಚಾರಿತ್ರಿಕ ಹಿನ್ನೆಲೆಯ ಮೇಲೆ ತುಳುನಾಡಿನಲ್ಲಿ ಬ್ರಾಹ್ಮಣರ ಆಗಮನವನ್ನು ನಿರ್ಧರಿಸುವುದಾದರೆ ದಕ್ಷಿಣ ಹಿಂದೂದೇಶದ ಪುರಾತನ ಸಾಮ್ರಾಜ್ಯ ಸಂಸ್ಥಾಪಕರ ಒಂದು ಸ್ಥೂಲ ಪರಿಚಯವನ್ನು ನಾವು ಮಾಡಿಕೊಳ್ಳುವುದು ಉಚಿತ.

ರಾಜಕೀಯವಾಗಿ ದಕ್ಷಿಣ ಭಾರತದಲ್ಲಿ ಪ್ರವೇಶ ಮಾಡಿದವರಲ್ಲಿ ಮೊಟ್ಟಮೊದಲಿನವರೆಂದರೆ ಮೌರ್ಯರೇ, ದಕ್ಷಿಣದಲ್ಲಿ ಮೈಸೂರಿನಷ್ಟು ದೂರಕ್ಕೆ ಮೌರ್ಯ ಸಾಮ್ರಾಜ್ಯವನ್ನು ಚಂದ್ರಗುಪ್ತನಾಗಲೀ, ಬಿಂದುಸಾರನಾಗಲೀ ವಿಸ್ತಾರಗೊಳಿಸಿರಬಹುದೇ ಎಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಮೈಸೂರಿನ ಸಿದ್ಧಾಪುರ ಮತ್ತು ಬ್ರಹ್ಮಗಿರಿಗಳಲ್ಲಿಯೂ, ಗುತ್ತಿಯ ಬಳಿಯಲ್ಲಿರುವ ಎರ್ರಗುಂಡಿಯಲ್ಲಿಯೂ ದೊರೆತಿರುವ ಅಶೋಕನ ಶಿಲಾ ಶಾಸನಗಳು ಅವನು ಸಿಂಹಾಸನವೇರುವ ಮುನ್ನವೇ ಮೌರ್ಯ ಸಾಮ್ರಾಜ್ಯವು ಮೇಲ್ಕಂಡ ಪ್ರದೇಶಗಳಲ್ಲಿಯೂ ವ್ಯಾಪಿಸಿತ್ತೆಂಬುದನ್ನು ತೋರಿಸುತ್ತವೆ. ಮೌರ್ಯರು ದಕ್ಷಿಣ ಭಾರತವನ್ನು ಮುತ್ತಿದ ವಿಚಾರವನ್ನು ಕುರಿತು 'ಸಂಘಮ್' ಸಾಹಿತ್ಯದಲ್ಲಿ ಕೆಲವಾರು ಕಡೆ ಪ್ರಸಂಗ ಮಾಡಲಾಗಿದೆ. ಆದುದರಿಂದ ಈ ಮುತ್ತಿಗೆಯನ್ನು ಕುರಿತು ಸಂಶಯಪಡುವುದೇ ಅನವಶ್ಯಕವೆಂದು ವಿದ್ವಾಂಸರ ಅಭಿಪ್ರಾಯ. ಈ ಸಾಹಸದ ಮುತ್ತಿಗೆಯಲ್ಲಿ ಬಿಂದುಸಾರನೇ ನಾಯಕ ಪಾತ್ರವನ್ನು ವಹಿಸಿದ್ದನೆಂದು ಊಹಿಸಬಹುದು. ಬಿಂದುಸಾರನು ಹದಿನಾರು ರಾಜ್ಯಗಳನ್ನು ವಶಪಡಿಸಿಕೊಂಡಿದ್ದನೆಂದೂ ಇವೆಲ್ಲ ರಾಜ್ಯಗಳೂ ಉತ್ತರ ಭಾರತಕ್ಕೆ ಸೇರಿದ್ದಿರಲಾರವೆಂದೂ ತಾರಾನಾಥನು ಹೇಳುತ್ತಾನೆ. ಗ್ರೀಕರು ಅವನನ್ನು 'ಅಮಿತಘಾತ' ಎಂದು ಕರೆದಿದ್ದರು. ಈ ಪ್ರಶಸ್ತ ಬಿರುದು ಅವನ ಸೇನಾಧಿಪತ್ಯವನ್ನು ಗಳಿಸಿದ ಜಯಗಳನ್ನು ಸಮರ್ಥನೆ ಮಾಡುವಂತಿದೆ. ಕಳಿಂಗ ರಾಜ್ಯವು ಪತನವಾಗದಿದ್ದುದನ್ನು ಕಂಡರೆ ಬಿಂದುಸಾರನು ಅತ್ಯಂತ ಪ್ರಬಲವಾದ ಶಕ್ತಿಗಳನ್ನು ಎದುರಿಸಬೇಕಾಗಿತ್ತೆಂದು ತೋರುತ್ತದೆ. ಬಿಂದುಸಾರನು ಸೇನಾ ಸಮೂಹದಲ್ಲಿ ಒಂದು ಭಾಗವು ವೈಜಯಂತಿಯ ಹತ್ತಿರ (ಬನವಾಸಿ) ಪಶ್ಚಿಮ ಕರಾವಳಿಯನ್ನು ಪ್ರವೇಶಿಸಿ ದಕ್ಷಿಣಕ್ಕೆ ಮುಂದೊತ್ತಿ 'ನನ್ನನ್' ಎಂಬ ತುಳುವ ರಾಜನನ್ನು ಸೋಲಿಸಿ ಕಣ್ಣಾನೂರಿಗಿಂತ ಸುಮಾರು ಹದಿನಾರು ಮೈಲು ಉತ್ತರಕ್ಕಿರುವ 'ಎಲಿಮಲೆ'ಯ ಕಣಿವೆಗಳ ಮೂಲಕ ಪೂರ್ವಕ್ಕೆ ಮುಂದೊತ್ತಿ 'ಕೂಡನಾಡ'ನ್ನು ಸೇರಿ, ಅಲ್ಲಿಂದ ಕೊಂಗನಾಡಿನ ಮುಖಾಂತರ 'ಪೋಡಿನಿ' ಬೆಟ್ಟಗಳ ಬದಿಯಲ್ಲಿ ದಕ್ಷಿಣಕ್ಕೆ ಹೋಗಿ 'ಪುದಿಯಿಲ್' ಬೆಟ್ಟಗಳ ಪ್ರದೇಶವನ್ನು ಮುಟ್ಟಿತೆಂದು ತಮಿಳು ಗ್ರಂಥಗಳಿಂದ ತಿಳಿದು ಬರುತ್ತದೆ. ಇನ್ನೊಂದು ಸೇನಾ ಸಮೂಹವು ನೈಋತ್ಯಕ್ಕೆ ದಾಳಿಯಿಟ್ಟು 'ಅರೈಯಮ್', ತಗಡರು ಪ್ರಾಂತ್ಯಗಳಿಂದಾಗಿ ತಿರುಕೊಯಿಲೂರು ಪ್ರಾಂತ್ಯವನ್ನು ಪ್ರವೇಶಿಸಿದಾಗ ಪ್ರಬಲರಾದ ಚೋಳರಾಜರಿಂದ ಸೋಲಿಸಲ್ಪಟ್ಟಿತೆಂದು ತಿಳಿಯುತ್ತದೆ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)


**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



ಉಡುಪಿ ವಿಶಿಷ್ಟ ರುಚಿಯುಳ್ಳ

**Rao's 'ಮಾತೃಛಾಯಾ'ರವರ**

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-

**ಭಾರತ್ ಸ್ಟೋರ್ಸ್**

ರಥಬೀದಿ, ಉಡುಪಿ - 576 101. ಫೋನ್ : 2522444

## ಮಾಂಗಲ್ಯಂ ತಂತುನಾನೇನ ....

ಬೆಳ್ಳಪಾಡಿ ಪಿ.ಎಸ್.ಸೀತಾರಾಮರಾವ್ ಇವರ ಪುತ್ರ **ಪಿ.ಎಸ್.ಶ್ರೀನಂದ** ಹಾಗೂ ಮಣಿಕಳ ಜಗದೀಶ ರಾವ್ ಇವರ ಪುತ್ರಿ **ಜಾಹ್ನವಿ** ಇವರ ವಿವಾಹವು ತಾ.30-08-2009ರಂದು ಪುತ್ತೂರು ತಾಲೂಕಿನ ಅಲಂಕಾರಿನಲ್ಲಿರುವ ರಾಣಿಮಹಲ್ (ಸೀತಾರತ್ನಕಲ್ಯಾಣ ಮಂಟಪ)ನಲ್ಲಿ ನೆರವೇರಿತು.

★★★★

ರಾಣೇಬೆನ್ನೂರು ವಾಸಿ ಶ್ರೀಮತಿ ಶಶಿಕಲಾ ಮತ್ತು ಶ್ರೀ ಎಸ್.ಪಿ.ಸದಾಶಿವ ಇವರ ಸುಪುತ್ರ **ವಿಶ್ವನಾಥ** ಹಾಗೂ ಬಂಟ್ವಾಳ ತಾಲೂಕು ವಿಟ್ಲ ನಿವಾಸಿ ಶ್ರೀಮತಿ ಕೆ. ನಳಿನಿ ರಾವ್ ಹಾಗೂ ದಿ। ಬಿ. ಮನೋಹರ್‌ರಾವ್ ಇವರ ಪುತ್ರಿ **ರೇಷ್ಮ** ಇವರ ವಿವಾಹವು ತಾ.30-08-2009ರಂದು ಹೆಬ್ರಿ ಶ್ರೀ ಅನಂತಪದ್ಮನಾಭ ದೇವರ ಸನ್ನಿಧಿಯಲ್ಲಿ ನೆರವೇರಿತು.

---

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.07-10-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

---

ಶ್ರೀಶಾರದಾ ದೇವಸ್ಥಾನದಲ್ಲಿ
**ಅಕ್ಟೋಬರ್ ತಿಂಗಳಲ್ಲಿ**
**ತಾ.10-10-2009ರ ಶನಿವಾರ**
ಸಂಜೆ ಗಂಟೆ 5-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**

---

## ಕನ್ಯಾ ಮಾಸ ವಿಶೇಷ ದಿನಗಳು

| | |
|---|---|
| 16-09-2009 | **ಕನ್ಯಾ ಸಂಕ್ರಮಣ** |
| 18-09-2009 | **ಮಹಾಲಯ ಅಮಾವಾಸ್ಯೆ** |
| 19-09-2009 | **ನವರಾತ್ರಿ ಪ್ರಾರಂಭ** |
| 23-09-2009 | **ಶ್ರೀ ಲಲಿತಾ ಪಂಚಮಿ** |
| 27-09-2009 | **ಮಹಾನವಮಿ** |
| 28-09-2009 | **ವಿಜಯದಶಮಿ** |
| 29-09-2009 | **ಸ್ಮಾರ್ತ ಏಕಾದಶೀ** |
| 30-09-2009 | **ವೈಷ್ಣವ ಏಕಾದಶೀ** |
| 01-10-2009 | **ಪ್ರದೋಷಃ** |
| 04-10-2009 | **ಪೂರ್ಣಿಮಾ** |
| 07-10-2009 | **ಸಂಕಷ್ಟಹರ ಚತುರ್ಥೀ** ಚಂದ್ರೋದಯ ರಾತ್ರಿ ಗಂ.8.46ಕ್ಕೆ |
| 14-10-2009 | **ಸರ್ವೇಕಾದಶೀ** |
| 15-10-2009 | **ಪ್ರದೋಷಃ** |
| 17-10-2009 | **ತುಲಾ ಸಂಕ್ರಮಣ** |
| | **ನರಕ ಚತುರ್ದಶಿ** |

---

## ಅಭಿನಂದನೆ

### ಶ್ರೀಮತಿ ಅಕ್ಷಯಾ ರಾವ್



ಶ್ರೀಮತಿ ಅಕ್ಷಯಾರಾವ್ ಇವರು 2009 ಜೂನ್‌ನಲ್ಲಿ ಜರಗಿದ C.A. ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ತೇರ್ಗಡೆ ಯಾಗಿರುತ್ತಾರೆ. ಇವರು ಆರೂರು ಕಿರಣ್‌ರಾವ್‌ರವರ ಧರ್ಮಪತ್ನಿ ಹಾಗೂ ಆರೂರು ಬಾಲಕೃಷ್ಣರಾವ್ ಮತ್ತು ಶ್ರೀಮತಿ ಶಾಂತರಾವ್‌ರವರ ಸೊಸೆ. ಇವರು ಒಂದನೆ ತರಗತಿಯಿಂದಲೂ ತರಗತಿಗೆ ಪ್ರಥಮ ಸ್ಥಾನಿಯಾಗಿದ್ದು 2005-06 ಸಾಲಿನ B.Com ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಗಳಿಸಿದಾಗ 'ಶ್ರೀಶಾರದಾ' ಇವರಿಗೆ ಪ್ರಶಸ್ತಿ ನೀಡಿ ಅಭಿನಂದಿಸಿತ್ತು. ಇವರು ಚೆಂಡುಕಳ ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಮಹಾಲಕ್ಷ್ಮೀರಾವ್ ದಂಪತಿಯರ ಸುಪುತ್ರಿಯಾಗಿದ್ದು ವಿವಾಹದ ನಂತರ ಮಾಡಿದ ಈ ಸಾಧನೆ ನಿಜಕ್ಕೂ ಶ್ಲಾಘನೀಯ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕುಮಾರಿ ಅರ್ಚನ



ವಿಜಯಾ ಕಾಲೇಜು ಮುಲ್ಕಿಯ ವಿದ್ಯಾರ್ಥಿನಿಯಾದ ಕುಮಾರಿ ಅರ್ಚನ ಇವರು ಬಿ.ಕಾಂ. 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ.89.33 ಅಂಕಗಳನ್ನು ಗಳಿಸಿ (ಬಿ.ಕಾಂ ಎಗ್ರಿಗೇಟ್ ಶೇ.84.64) ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. ಇವರು ಪಾದೆಬೆಟ್ಟು ಪಡುಬಿದ್ರಿ ಪಿ. ದೇವರಾಯ ಶರ್ಮ ಹಾಗೂ ಶ್ರೀಮತಿ ಜಯಲಕ್ಷ್ಮಿ ಇವರ ಸುಪುತ್ರಿ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕೆ. ಉಮೇಶ ಶ್ಯಾನುಭೋಗ್



ಕುಂದಾಪುರ ತಾಲೂಕು ಕಿರಿಮಂಜೇಶ್ವರದ ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿಯಾಗಿ ಶ್ರೀ ಕೆ. ಉಮೇಶ ಶ್ಯಾನುಭೋಗ್‌ರವರು ಪುನರಾಯ್ಕೆಗೊಂಡಿದ್ದಾರೆ. ಈ ಹಿಂದೆ ಆಡಳಿತ ಸಹಧರ್ಮದರ್ಶಿಯಾಗಿ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ, ಆಡಳಿತ ಧರ್ಮದರ್ಶಿಯಾಗಿ ಕೂಡಾ ಕಾರ್ಯನಿರ್ವಹಿಸಿದ್ದು ದೇವಾಲಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಅಲ್ಲದೆ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಸರ್ವಸದಸ್ಯರು ಈ ಸಂದರ್ಭದಲ್ಲಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಗೃಹಪ್ರವೇಶ

ಕಟಪಾಡಿ ಮೂಡಬೆಟ್ಟು ದಿ। ರಾಮಕೃಷ್ಣ ರಾಯರ ಪುತ್ರ ದಿನೇಶ ಆರ್. ಕಟಪಾಡಿ ಹಾಗೂ ಶ್ರೀಲತಾ ದಂಪತಿಗಳು ಮೂಡಬೆಟ್ಟಿನಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಕೃಷ್ಣಗಿರಿ'ಯ ಪ್ರವೇಶೋತ್ಸವವನ್ನು ತಾ.2-9-2009 ರಂದು ನೆರವೇರಿಸಿದರು.

---

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

- ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಹಂದಿಜ್ವರ ಎಂದರೇನು? ಈ ಖಾಯಿಲೆಗೆ ಪರಿಹಾರೋಪಾಯಗಳೇನು?**

**ಉತ್ತರ :** 'ಹಂದಿಜ್ವರ' ಅಥವಾ 'ಸ್ವೈನ್ ಫ್ಲೂ' ಎಂದು ಕರೆಯಲಾಗುತ್ತಿರುವ ಈ ಜ್ವರವು ಒಂದು ತರಹದ 'ಫ್ಲೂ' ಜ್ವರ. ಇದು $H_1N_1$ ಎಂದು ಕರೆಯಲ್ಪಡುವ ವೈರಸ್‌ನಿಂದ ಬರುತ್ತದೆ. ಇದು ಸಾಮಾನ್ಯವಾಗಿ ಹಂದಿಗಳಲ್ಲಿ ಕಂಡುಬರುತ್ತಿದ್ದರೂ ಮನುಷ್ಯನಿಗೆ ಈ ವೈರಸ್ ಪೀಡಿಸಬಲ್ಲುದು. ಹಂದಿಜ್ವರ ತಗುಲಿಕೊಳ್ಳಲು ಮನುಷ್ಯನಿಗೆ ಹಂದಿಯ ಸಂಪರ್ಕ ಇರಬೇಕೆಂದೇನಿಲ್ಲ. ಮನುಷ್ಯರಿಂದ ಮನುಷ್ಯರೊಳಗೆ ಈ ಜ್ವರ ಹರಡಬಲ್ಲದು. ಈಗಾಗಲೇ ಸುಮಾರು 170ಕ್ಕೂ ಹೆಚ್ಚು ದೇಶಗಳಲ್ಲಿ ಈ ಖಾಯಿಲೆ ವ್ಯಾಪಿಸಿದೆ.

**ಪ್ರಶ್ನೆ : ಜ್ವರದ ಚಿಹ್ನೆಗಳೇನು?**

**ಉತ್ತರ :** *ಜ್ವರ, ಮೈಕೈನೋವು, ಚಳಿ, ತಲೆನೋವು, ಸುಸ್ತು. *ಶೀತ, ಗಂಟಲು ನೋವು, ಕೆಮ್ಮು *ವಾಂತಿ, ಬೇಧಿ,

**ಪ್ರಶ್ನೆ : ತೀವ್ರತರಹದ ರೋಗಬಾಧೆಯಿದ್ದರೆ?**

**ಉತ್ತರ :** *ಮೇಲುಬ್ಬಸ (Dyspnea), ಎದೆನೋವು, ತಲೆಸುತ್ತುವುದು *ಭ್ರಾಂತಿಯಾಗುವುದು, ಗಾಬರಿಯಾಗುವುದು. ಇತರ ಎಲ್ಲಾ ಫ್ಲೂಜ್ವರಗಳಿಗಿಂತ ಹಂದಿಜ್ವರದ ಫ್ಲೂನಲ್ಲಿ ಮರಣಹೊಂದುವವರ ಸಂಖ್ಯೆ ಹೆಚ್ಚು (0.8%). ಹಾಗಾಗಿ ಈ ರೋಗದ ಬಗ್ಗೆ ಎಲ್ಲರಿಗೂ ಹೆಚ್ಚಿನ ಕಾಳಜಿ.

**ಪ್ರಶ್ನೆ : ಈ ರೋಗ ಹರಡುವುದು ಹೇಗೆ?**

**ಉತ್ತರ :** ಕೆಮ್ಮುವಾಗ, ಸೀನುವಾಗ, ಮಾತನಾಡುವಾಗ ನಮ್ಮ ಬಾಯಿಯಿಂದ ಅತ್ಯಂತ ಸಣ್ಣ ಕಣದ ಗಾತ್ರದಲ್ಲಿ (ಮೈಕ್ರಾನ್ ಗಾತ್ರ) ಕಫದ ಉಂಡೆಗಳು ಹೊರಬೀಳುತ್ತವೆ. ಇದನ್ನು Droplet ಎಂದು ಕರೆಯುತ್ತೇವೆ. ಈ ಕಣವು ಒಬ್ಬ ವ್ಯಕ್ತಿಯು ಕೆಮ್ಮುವಾಗ ಸುಮಾರು ಒಂದು ಮೀಟರ್‌ನಷ್ಟು ದೂರದ ತನಕ ಚಿಮ್ಮುವ ಸಾಧ್ಯತೆ ಇರುತದೆ. ರೋಗಿಯ ಬಾಯಿಂದ ಚಿಮ್ಮಲ್ಪಟ್ಟ ಕಫದ ಉಂಡೆಯಲ್ಲಿ ವೈರಸ್ ಇರುತ್ತದೆ. ಈ ಕಫದ ಉಂಡೆಯು ಉಸಿರಾಡಿದ ಗಾಳಿಯ ಮೂಲಕ ಇತರರ ದೇಹವನ್ನು ಪ್ರವೇಶಿಸಿ ಅವರಿಗೂ ಈ ಖಾಯಿಲೆ ಉಂಟು ಮಾಡುತ್ತದೆ. ಕಫ, ಸಿಂಬಳ ಇತ್ಯಾದಿ ಇರಬಹುದಾದ ವಸ್ತುಗಳನ್ನು (ಉದಾ : ನಳ್ಳಿ, ವಸ್ತ್ರ) ಮುಟ್ಟಿ ನಂತರ ನಮ್ಮ ಮೂಗು ಬಾಯಿ ಮುಟ್ಟಿಕೊಂಡರೂ ವೈರಸ್ ಹರಡುವಷ್ಟು ಚುರುಕುತನ ಹೊಂದಿದೆ.

**ಪ್ರಶ್ನೆ : ರೋಗ ತಗುಲಿದ ನಂತರ ಏನಾಗುವುದು?**

**ಉತ್ತರ :** ಹಂದಿಜ್ವರ ತಗುಲಿದರೆ ಮೊತ್ತ ಮೊದಲಿಗೆ ಚಳಿ, ಜ್ವರ, ಮೈಕೈ ನೋವು, ಗಂಟಲು ನೋವು, ವಾಂತಿ ಇತ್ಯಾದಿಗಳು ಆರಂಭವಾಗುವವು. ಹೆಚ್ಚಿನ ರೋಗಿಗಳಿಗೆ ಇಷ್ಟರಲ್ಲಿಯೇ ರೋಗ ವಾಸಿಯಾಗುವುದು. ಹಾಗಾಗಿ ಅವರಿಗೆ ಇದು ಹಂದಿಜ್ವರವೇ ಅಥವಾ ಬೇರೆ ಮಾಮೂಲಿ 'ಫ್ಲೂ' ಜ್ವರ ಬಂದಿರುವುದೇ ಎಂದು ತಿಳಿಯುವುದಿಲ್ಲ. ಆದರೆ ಕೆಲವು ರೋಗಿಗಳಲ್ಲಿ ಅದು ಚಿಕ್ಕಮಕ್ಕಳು, ಗರ್ಭಿಣಿಯರು, ವೃದ್ಧರು ಹಾಗೂ ಅಶಕ್ತರಲ್ಲಿ ಈ ರೋಗ ತೀವ್ರತರವಾಗಿ ಭಾದಿಸಿ ಮೇಲೆ ಹೇಳಿದ ಚಿಹ್ನೆಗಳು ತೀವ್ರತರಹದ್ದಾಗಿರುವವು. ಉಸಿರಾಡಲು ಕಷ್ಟವಾಗಬಹುದು. ಎದೆನೋವು ಬರಬಹುದು. ರೋಗಿಯು ಭ್ರಾಂತಿ ಹಿಡಿದವನಂತೆ ವರ್ತಿಸಬಹುದು. ಇಂತಹ ರೋಗಿಗಳು ಮರಣ ಹೊಂದುವ ಸಾಧ್ಯತೆ ಇದೆ.

**ಪ್ರಶ್ನೆ : ಈ ರೋಗಕ್ಕೆ ಚಿಕಿತ್ಸೆ ಏನು?**

**ಉತ್ತರ :** ಸಣ್ಣ ಪ್ರಮಾಣದ ಚಿಹ್ನೆಗಳಿರುವವರಿಗೆ ಮಾಮೂಲಿ ಫ್ಲೂಜ್ವರದ ಚಿಕಿತ್ಸೆ ಸಾಕು ಹಾಗೂ ಅಂತಹವರು ತಮಗೆ ಹಂದಿಜ್ವರ ಬಂದಿದೆಯೇ ಎಂದು ತಪಾಸಣೆ ನಡೆಸುವ ಅಗತ್ಯ ಇಲ್ಲ.

ತೀವ್ರತರಹದ ಚಿಹ್ನೆಗಳಿದ್ದರೆ ಅಥವಾ ರೋಗಿಯು ಒಂದು ವಾರದೊಳಗೆ ಹಂದಿಜ್ವರ ಪೀಡಿತ ರೋಗಿಯ ಸಂಪರ್ಕಕ್ಕೆ ಬಂದಿದ್ದಲ್ಲಿ ಅಥವಾ ಹಂದಿಜ್ವರ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ್ದಲ್ಲಿ ಅಂತಹವರು ತಮಗೆ ಬಂದಿರುವ ಜ್ವರ ಹಂದಿಜ್ವರವೇ ಎಂದು ತಪಾಸಣೆಗೊಳಪಡುವ ಅಗತ್ಯ ಇದೆ. ಗಂಟಲ ಸ್ರಾವವನ್ನು ಮೈಕ್ರೋಬಯೋಲಜಿ ತಪಾಸಣೆಗೊಳಪಡಿಸುವುದರ ಮೂಲಕ ಇದನ್ನು ಖಚಿತಪಡಿಸಿಕೊಳ್ಳಬಹುದು. ಇಂತಹ ರೋಗಿಗಳಿಗೆ ವೈದ್ಯರು ಟಮಿಫ್ಲೂ (Tamiflu) ಎಂಬ ಔಷಧಿಯನ್ನು ಬಳಸುತ್ತಾರೆ.

**ಪ್ರಶ್ನೆ : ರೋಗ ತಗಲದಂತೆ ಏನು ಮಾಡಬಹುದು?**

**ಉತ್ತರ :** ಮೂಗು ಹಾಗೂ ಗಂಟಲಸ್ರಾವದ ಮೂಲಕ ಈ ವೈರಾಣು ಹರಡುವುದರಿಂದ ಅಂತಹ ಗಾಳಿಯು ಉಸಿರಿನ ಮೂಲಕ ನಮ್ಮ ದೇಹವನ್ನು ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಅಂದರೆ ಒಬ್ಬರಿಗೊಬ್ಬರು ಸಂಪರ್ಕಕ್ಕೆ ಬರುವಾಗ ಕನಿಷ್ಠ ಒಂದು ಮೀಟರ್ ಅಂತರ ಕಾಯ್ದುಕೊಳ್ಳಬೇಕು. ತುಂಬಾ ಜನರು ಸೇರಿರುವ ಪ್ರದೇಶಕ್ಕೆ ಹೋಗಬಾರದು. ಅಷ್ಟೇ ಅಲ್ಲದೆ ಗಂಟಲಸ್ರಾವ ತಗುಲಿದ್ದ ವಸ್ತುವನ್ನು ನಮಗರಿವಿಲ್ಲದೆ ಮುಟ್ಟಿರುವ ಸಾಧ್ಯತೆ ಇರುವುದರಿಂದ ಪದೇ ಪದೇ ಕೈ ತೊಳೆದುಕೊಳ್ಳುತ್ತಿರಬೇಕು. ಒಂದು ವೇಳೆ ಹಂದಿ ಜ್ವರ ಪೀಡಿತ ವ್ಯಕ್ತಿ ನಿಮ್ಮಲ್ಲಿದ್ದರೆ ಅವನಿಗೆ ಇತರರ ಸಂಪರ್ಕ ಬರದಂತೆ ಇರಿಸಬೇಕು. ಹಂದಿಜ್ವರ ವ್ಯಾಪಕವಾಗಿ ಇರುವ ಪ್ರದೇಶದಲ್ಲಿ ಶಂಕಿತ ರೋಗಿಯೂ ಇದೇ ರೀತಿ ನಡೆದುಕೊಳ್ಳಬೇಕು. ಅವರು ಕೆಮ್ಮುವಾಗ, ಸೀನುವಾಗ ವಸ್ತುವೊಂದನ್ನು ಅಡ್ಡವಿರಿಸಿಕೊಂಡು ಅದನ್ನು ತಕ್ಷಣವೇ ಜಾಗ್ರತೆಯಾಗಿ ಮುಚ್ಚಳವಿರುವ ಪಾತ್ರೆಯಲ್ಲಿ ಮುಚ್ಚಿಟ್ಟು ನಂತರ ಸುಟ್ಟುಬಿಡಬೇಕು.

**ಪ್ರಶ್ನೆ : ಮಾಸ್ಕ್ ಧರಿಸುವುದು ಯಾಕೆ ನಿಷ್ಫಲ?**

**ಉತ್ತರ :** ದಿನದ 24 ಗಂಟೆಯೂ ಮಾಸ್ಕ ಧರಿಸುವುದು ಅಸಾಧ್ಯ. ಹೆಚ್ಚಿನ ಮಾಸ್ಕ್‌ಗಳು ವೈರಾಣು ನಿರೋಧಕ ಅಲ್ಲ. ಮಾಸ್ಕ್ ಧರಿಸುವುದಾದರೂ ಪ್ರತಿ ಮೂರು-ನಾಲ್ಕು ಗಂಟೆಗಳಿಗೊಮ್ಮೆ ಬದಲಾಯಿಸಬೇಕು. ಹಾಗಾಗಿ ರೋಗಪೀಡಿತ ವ್ಯಕ್ತಿಯನ್ನೇ ರೋಗಗುಣವಾಗಿಯೂ ಒಂದು ವಾರದ ತನಕ ಪ್ರತ್ಯೇಕವಾಗಿಡುವುದು ರೋಗ ಹರಡದಂತೆ ಮಾಡಲು ಉತ್ತಮ ಉಪಾಯ.

ಅದರೊಂದಿಗೆ ಎಲ್ಲರೂ : ಇತರರೊಂದಿಗೆ ವ್ಯವಹರಿಸುವಾಗ 1 ಮೀಟರ್ ಅಂತರ ಇರಿಸಿಕೊಳ್ಳುವುದು.ಕೆಮ್ಮುವಾಗ, ಸೀನುವಾಗ ಬಳಸಿ ಎಸೆಯುವ (ಎಲ್ಲೆಂದರಲ್ಲಿ ಎಸೆಯಲು ಅಲ್ಲ!) ಕರವಸ್ತ್ರಗಳನ್ನು ಮುಖಕ್ಕೆ ಅಡ್ಡವಾಗಿರಿಸಿಕೊಳ್ಳುವುದು. ಕಂಡಲ್ಲಿ ಉಗುಳುವ, ಸಿಂಬಳ ಹಚ್ಚುವ ಸ್ವಭಾವ ವರ್ಜಿಸುವುದು. ಪದೇ ಪದೇ ಕೈತೊಳೆಯುವುದು. ಫ್ಲೂಜ್ವರದ ರೋಗಿಯು ಸಂಪರ್ಕ ಬಂದಾಗ ಸ್ವಲ್ಪ ಎಚ್ಚರವಹಿಸುವುದು ಇತ್ಯಾದಿಗಳು ರೋಗ ತಮಗೆ ತಗುಲದಂತೆ ಕಾಪಾಡಿಕೊಳ್ಳುವ ಸುಲಭೋಪಾಯಗಳು.

**"ಹಂದಿಜ್ವರದ ಬಗ್ಗೆ ಎಚ್ಚರ ಅಗತ್ಯ ಆದರೆ ಭೀತಿ ಅನಗತ್ಯ"**

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

# ಮಿತ್ರ ಸಮಾಜ, ಪುತ್ತೂರು - 574 201, ದ.ಕ.

ಆತ್ಮೀಯ ಬಂಧುಗಳೇ,

ಸಪ್ರೇಮುವಂದನೆಗಳು.

**ಅನಿರೀಕ್ಷಿತ!!? ಆದರೆ ಅಷ್ಟೇ ಶೋಚನೀಯ, ಚಿಂತನೀಯ, ಜಟಿಲ ಸಮಸ್ಯೆಯೊಂದರ ಬಗ್ಗೆ ನೀವು ಎಂದಾದರೂ ಆಲೋಚಿಸಿದ್ದೀರಾ?**

ಅಣ್ಣಾ!... ನನ್ನ ಮಗ ಪದವೀಧರ, ಕೃಷಿಕ, ಸಾಕಷ್ಟು ಆಸ್ತಿ ಇದೆ. ಪ್ರಾಯ ಕಳೆಯುತ್ತಾ ಇದೆ. ಒಂದು ನಮ್ಮ ಬಂಧುಗಳೊಳಗೆ ಹೆಣ್ಣನ್ನು ಸೂಚಿಸುತ್ತೀರಾ? ಬಾವಾಜೀ!... ಸಂಸ್ಕೃತ-ವೇದಾಧ್ಯಯನ ಆಗಿದೆ. ಸಮಾಜದ ಗೌರವಾನ್ವಿತ ಅರ್ಚಕ ವೃತ್ತಿ ಮಾಡುತ್ತಿದ್ದಾನೆ. ಅವನಿಗೆ ಕನ್ಯೆ ಸಿಗಬಹುದೇ?. ಅಕ್ಕಾ...! ನನ್ನ ಮಗ ಆಸ್ತಿವಂತ, ಪ್ರಗತಿಪರ ಕೃಷಿಕ. ಸಾಧಾರಣ ವಿದ್ಯಾವಂತ. ಮದುವೆ ಪ್ರಾಯ ಈಗಾಗಲೇ ದಾಟಿದೆ. ವಿವಾಹ ಯೋಗ್ಯ ಕನ್ಯೆ ಇದೆಯೇ? ಅತ್ತಿಗೇ...! ನನ್ನ ಮಗ/ಳು ಅಮೇರಿಕಾದಲ್ಲಿ ಡಾಕ್ಟರ್. ಇನ್ನೊಬ್ಬ/ಳು ಡಬಲ್ ಇಂಜಿನಿಯರಿಂಗ್ ಗ್ರಾಜುಯೆಟ್. ಇಬ್ಬರಿಗೂ ವಾರ್ಷಿಕ ಲಕ್ಷಕ್ಕೂ ಹೆಚ್ಚು ಸಂಬಳ ಇದೆ. ಅವರದೇ ವೃತ್ತಿಯ ಅಷ್ಟೆ ಯೋಗ್ಯ ವರ ನೋಡಬಹುದೇ?

ಇಂತಹ ಸಂಭಾಷಣೆಗಳು ಕಳೆದ 2-3 ವರುಷಗಳಿಂದ ನಮ್ಮ ಮದುವೆ-ಉಪನಯನ-ಗೃಹಪ್ರವೇಶದ ಸಮಾರಂಭದಲ್ಲಿ ಬಂಧುಗಳ ಬಾಯಲ್ಲಿ ಗುನುಗುನಿಸುತ್ತಿವೆ. ''ಮೊನ್ನೆ ಅನಾಥಾಶ್ರಮದ ಪ್ರಾಯಸ್ಥ ಹೆಣ್ಣು ಮಕ್ಕಳನ್ನೆಲ್ಲಾ ಬೇರೆ ಬೇರೆ ಸ್ಥಿತಿವಂತರು ಮದುವೆ ಆದರಂತೆ''. ''ದೆಹಲಿಯಲ್ಲಿ ಉನ್ನತ ಹುದ್ದೆಯಲ್ಲಿದ್ದ ನಮ್ಮ ಸಮಾಜ ಬಂಧುವೊಬ್ಬ, ಬೇರೆ ಪಂಗಡದ ಕನ್ಯೆಯನ್ನು ಮದುವೆಯಾದನಂತೆ'' ''ಬೆಂಗಳೂರಿನಲ್ಲಿ ನಮ್ಮ ಒಂದು ಒಳ್ಳೆಯ ಕನ್ಯೆಯು ಅವಳಿಗೆ ಯೋಗ್ಯ ವರ ನಮ್ಮಲ್ಲಿ ಸಿಗದಿದ್ದರಿಂದ ಬೇರೆ ಯಾವುದೋ ಪಂಗಡದವರನ್ನು ವರಿಸಿದಳಂತೆ''.

ಹೀಗೆ ಸಾಗುತ್ತದೆ-ನಮ್ಮ ಮಾತುಕತೆಗಳು- ಅಂತೆ ಕಂತೆಗಳೊಂದಿಗೆ, ನೈಜ ಸಂಗತಿಯೂ ಕೂಡಾ. ಬಂಧುಗಳೇ, ಈಗಲೇ ಹೀಗಾದರೆ ಮುಂದಿನ 25 ವರುಷಗಳ ನಂತರದ ನಮ್ಮ ತಲೆಮಾರಿನ ಪಾಡೇನು? ಈ ರೀತಿ ಮುಂದುವರಿದರೆ ಮದುವೆ ವಯಸ್ಸಿಗೆ ಯುವಕ-ಯುವತಿಯರ ಪಾಡೇನು? ಅವರ ಮುಂದಿನ ಬದುಕೇನು? ವಿವಾಹ ರಹಿತರಾಗಿ ಉಳಿದರೆ/ಬೇರೆ ಪಂಗಡದವರನ್ನು ಮದುವೆಯಾದರೆ ಅವರ ಕುಟುಂಬದ ಮುಂದಿನ ಗತಿಯೇನು? ಈಗಾಗಲೇ ಒಂದು ಅಂದಾಜು ಅಂಕೆ-ಸಂಖ್ಯೆಗಳ ಪ್ರಕಾರ ಒಟ್ಟು ವಿಶ್ವದಲ್ಲಿ 20-30 ಸಾವಿರದಷ್ಟು ಇರುವ ನಮ್ಮ ಈ ಶ್ರೇಷ್ಠ, ಸುಸಂಸ್ಕೃತ, ಜವಾಬ್ದಾರಿಯುತ ಈ ದೇಶದ ಮಣ್ಣಿನಲ್ಲಿ ಮಾತ್ರ ಬದುಕಿ ಬೆಳೆಯಬಲ್ಲ ಈ ಸಣ್ಣ ಬ್ರಾಹ್ಮಣ ಸಮುದಾಯದ ಭವಿಷ್ಯವೇನು?

ಈ ಬಗ್ಗೆ ಆಲೋಚಿಸಿದ್ದೀರಾ? ಕೌಟುಂಬಿಕ ಬಂಧನದ, ಜೀವನದ ಮಧುರ ಕ್ಷಣಗಳಿಂದ ನಮ್ಮ ಇಂದಿನ ಯುವ ಜನರನ್ನು ವಂಚಿಸಿದರೆ, ಖಂಡಿತವಾಗಿ ತಾವು ಹೊಣೆಯಾಗುವುದಿಲ್ಲವೇ? ವಿವಾಹದ ಬಗ್ಗೆ ಆಶೆಯುಳ್ಳ ಯುವಕ-ಯುವತಿಯರಿಗೆ ಈ ಸಂದರ್ಭದಲ್ಲಿ ನಮ್ಮೆಲ್ಲರ ಸಹಾಯ, ಸಹಕಾರ ಮತ್ತು ಈ ಬಗ್ಗೆ ನಿರಂತರ ಪ್ರಯತ್ನಗಳು ನಮ್ಮೆಲ್ಲರ ಜವಾಬ್ದಾರಿಯಲ್ಲವೇ?

ಹಾಗಿದ್ದಲ್ಲಿ... ಖಂಡಿತಾ ಬನ್ನಿ. ಪ್ರಪ್ರಥಮ ವಾಗಿ ವಿವಾಹ ಯೋಗ್ಯ ಯುವಕ-ಯುವತಿಯರ ಸಂಪೂರ್ಣ ವಿವರಗಳನ್ನು ಸಂಗ್ರಹಿಸಿ ಅವರನ್ನು ಮತ್ತು ಅವರ ಕುಟುಂಬದವರನ್ನು ಒಟ್ಟು ಸೇರಿಸೋಣ. ಸಂಘ-ಸಂಸ್ಥೆಗಳ ಮೂಲಕ, ಪ್ರತಿನಿಧಿಗಳ ಮೂಲಕ ನಾವು ಸೇರೋಣ. ಒಂದು ಬೃಹತ್ ಯೋಗ್ಯ ವಧೂ- ವರರ-ಕುಟುಂಬ ಸಮಾವೇಶ ನಡೆಸೋಣ.

ಈ ನಿಟ್ಟಿನಲ್ಲಿ ನಾವು ದಶಂಬರ 2009ರ ಸುಮಾರಿಗೆ ತಮ್ಮ ಮತ್ತು ಸಮಾಜ ಬಾಂಧವರ ಸಹಕಾರವಿದ್ದರೆ ಒಂದು ಸಮಾವೇಶ ನಡೆಸಲು ಉದ್ದೇಶಿಸಿದ್ದೇವೆ. ತಾವು ಈ ಬಗ್ಗೆ ತಮ್ಮ ಸಲಹೆ-ಸೂಚನೆ-ಪರಿಹಾರ ಮತ್ತು ಸಹಕಾರವನ್ನು ನಮಗೆ ತಿಳಿಸಿ. ನಮ್ಮ ಯೋಜನೆಯ ಬಗ್ಗೆ ಮತ್ತು ಈ ಬಗ್ಗೆ ಯಾವ ರೀತಿಯಲ್ಲಿ ಮುಂದುವರಿಸಬಹುದು ಎಂಬುದರ ಬಗ್ಗೆ ನಾವು-ನೀವೂ ಸೇರಿ ಯೋಚಿಸುವ,

ಇತೀ ತಮ್ಮವರೇ ಆದ,

| ಪ್ರಸನ್ನ ಕುಮಾರ ಯಂ. | ಸದಾನಂದ ರಾವ್ ಯಸ್. | ಸತೀಶ್‌ರಾವ್ ಪಿ. | ಸುಧೀರ್ ರಾವ್ ಕೆ. | ಯಚ್.ಯಸ್.ಶಿವಪ್ರಸಾದ್ |
|---|---|---|---|---|
| ಕಾರ್ಯಕ್ರಮ ಸಂಯೋಜಕರು | | | ಕಾರ್ಯದರ್ಶಿ | ಅಧ್ಯಕ್ಷರು |
| ☎ 08251-230426 | ಸೆಲ್ : 9480347651 | ಸೆಲ್:9448216644 | ಸೆಲ್ : 9845133409 | ಸೆಲ್ : 9448313169 |

**ಮತ್ತು ಸರ್ವಸದಸ್ಯರು, ಮಿತ್ರ ಸಮಾಜ, ಪುತ್ತೂರು**

**ವಿಳಾಸ : ಮಿತ್ರಸಮಾಜ, ಆದರ್ಶ ಪ್ರೆಸ್, ಕೆ.ಪಿ.ಕಾಂಪ್ಲೆಕ್ಸ್, ಪುತ್ತೂರು - 574 201,ದ.ಕ.**

## ವರ ಬೇಕಾಗಿದೆ

ದಿ। ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಗೀತಾ ಸುಬ್ರಹ್ಮಣ್ಯ ರಾವ್ ಇವರ ಮಗಳು ಬಿ.ಇ. ಕಂಪ್ಯೂಟರ್ ವಿಜ್ಞಾನದಲ್ಲಿ ಡಿಗ್ರಿ ಹೊಂದಿರುವ ಸದ್ಯ ಬೆಂಗಳೂರಿನಲ್ಲಿ ಉಪನ್ಯಾಸಕಿ ವೃತ್ತಿಯಲ್ಲಿರುವ 5 ಅಡಿ 5 ಇಂಚು ಎತ್ತರವಿರುವ ಸುಮಾರು 26 ವರ್ಷ ಪ್ರಾಯದ (ಹುಬ್ಬಾ ನಕ್ಷತ್ರ, ಆಂಗೀರಸ ಗೋತ್ರ) ಹುಡುಗಿಗೆ ಸಮಾನ ವಿದ್ಯಾರ್ಹತೆಯುಳ್ಳ ವರ ಬೇಕಾಗಿದೆ.

**ದೂರವಾಣಿ : (080-26682179) ಎಮ್. ಮೋಹನ್‌ರಾವ್ (0820-2580001)**

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

**ದೂರವಾಣಿ : 0820-2520754**

# ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು-ನಾಡಹಬ್ಬ ಕಾರ್ಯಕ್ರಮ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅಕ್ಟೋಬರ್ 2, 2009 ಶುಕ್ರವಾರದಂದು ನಾಡಹಬ್ಬ ಕಾರ್ಯಕ್ರಮ ನಡೆಯಲಿದೆ. ಪ್ರತಿ ವರ್ಷದಂತೆ ಹಿರಿಯರಿಗೆ ಮತ್ತು ಕಿರಿಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

**ಕಾರ್ಯಕ್ರಮಗಳ ವಿವರ**

| | |
|---|---|
| ಬೆಳಿಗ್ಗೆ 9-00ರಿಂದ | **ಲಲಿತಾ ಸಹಸ್ರನಾಮ ಪಾರಾಯಣ** |
| 9-30ರಿಂದ | **ಹಿರಿಯರಿಗೆ ಹಾಗೂ ಕಿರಿಯರಿಗಾಗಿ ವಿವಿಧ ಸ್ಪರ್ಧೆಗಳು** (ರಂಗೋಲಿ, ಹೂ ಕಟ್ಟುವ ಸ್ಪರ್ಧೆ, ಭಕ್ತಿಗೀತೆ ರಸಪ್ರಶ್ನೆ ಇತ್ಯಾದಿ) |
| 12-30ರಿಂದ | **ಭೋಜನ** |
| 2-00ರಿಂದ | **ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನ ಪ್ರದರ್ಶನ** ಪ್ರಸಂಗ : ಧಕ್ಷಾಧ್ವರ-ಗಿರಿಜಾ ಕಲ್ಯಾಣ |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

**ಜಯಂತಿ ವಿನೋದ್‌ರಾವ್ (0824-2455283)**

**ಅರುಣಾ ಸೋಮಶೇಖರ್ (0824-2452860), ಅನಿಲ್ ರಾವ್ ಬಿ.ಎಸ್. (9880037110)**

## ವಧೂ-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ,**
**ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

**PRAMOD**
AUTOMOBILES
KARANGALPADY, MANGALORE -575 003.

Ph : 2491723 (0)
2493633 (H.O.)
2212723 (R)

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org